Swabhimani Sahakari
Pages - 36, ₹12
Volume -14
Issue - 10
October - 2017

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ




"ಸಹಕಾರ ಸ್ಫೂರ್ತಿಯನ್ನು
ಜೀವಂತವಾಗಿರಿಸಬೇಕು
ಮತ್ತು ಅದನ್ನು ಇನ್ನಷ್ಟು
ಬಲಗೊಳಿಸಬೇಕು"

– ನರೇಂದ್ರ ಮೋದಿ



ಬೆಳಗು ಬಾ ಹಣತೆಯನ್ನು
ನನ್ನೆದೆಯ ಗೂಡಿನಲ್ಲಿ
ಈ ದೀಪಾವಳಿಯ ಶುಭಗಳಿಗೆಯಲ್ಲಿ

–ಜಿ.ಎಸ್. ಶಿವರುದ್ರಪ್ಪ

▶▶ ಸೌಹಾರ್ದ ಸಹಕಾರಿಗಳ ಸಂಖ್ಯೆ : 4134 ▶▶ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1078



> ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯದ ನೂತನ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರನ್ನು, ಕೇಂದ್ರ ಸಚಿವರಾದ ಶ್ರೀ ಅನಂತ ಕುಮಾರ್‌ರವರನ್ನು ಹಾಗೂ ಶ್ರೀ ಅನಂತ ಕುಮಾರ ಹೆಗಡೆಯವರನ್ನು ಖುದ್ದಾಗಿ ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಗೆ ಬರಬೇಕೆಂದು ವಿನಂತಿಸಲಾಗಿತ್ತು, ಬರುವುದಾಗಿ ಒಪ್ಪಿದ್ದರು. ನಂತರ ಕಾರಣಾಂತರಗಳಿಂದ ಇವರುಗಳು ಸಭೆಗೆ ಬರಲು ಸಾಧ್ಯವಾಗಿರುವುದಿಲ್ಲ.

## 16ನೇ ವಾರ್ಷಿಕ ಸಾಮಾನ್ಯ ಸಭೆ - ಸದಸ್ಯ ಸಹಕಾರಿಗಳಿಗೆ ಕೃತಜ್ಞತೆ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಗಾಂಧೀ ಜಯಂತಿ, ವಾಲ್ಮೀಕಿ ಜಯಂತಿ ಹಾಗೂ ದೀಪಾವಳಿ ಹಬ್ಬದ ಶುಭಾಷಯಗಳು. ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ವಾರ್ಷಿಕ ಸಾಮಾನ್ಯ ಸಭೆಗಳು ಮುಗಿದು ನೂತನ ವರ್ಷದ ಕ್ರಿಯಾ ಯೋಜನೆಯ ಜಾರಿಗೆ ಕ್ರಮವಿಡುವ ಸಮಯ. ದೀಪಗಳ ಹಬ್ಬ ದೀಪಾವಳಿ ಎಲ್ಲರ ಮನೆ ಹಾಗೂ ಮನಗಳಲ್ಲಿ ಬೆಳಕನ್ನು ಚೆಲ್ಲಿ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿಯ ಜೊತೆಗೆ ಸೌಹಾರ್ದ ಸಹಕಾರಿಗಳಿಗೆ ಶಕ್ತಿಯನ್ನು ತುಂಬುವಂತಾಗಲಿ ಎಂದು ಹಾರೈಸುತ್ತೇನೆ.

ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯು ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿದೆ. ಸಭೆಯಲ್ಲಿ ವಿಷಯಗಳ ಬಗ್ಗೆ ಉತ್ತಮ ಚರ್ಚೆಗಳು ನಡೆದಿವೆ. ಸದಸ್ಯ ಸಹಕಾರಿಗಳು ಉತ್ತಮ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಮಾಡುವುದರ ಜೊತೆಗೆ ಸಂಯುಕ್ತ ಸಹಕಾರಿಯ ಕ್ರಿಯಾ ಯೋಜನೆಗಳನ್ನು, ಉಪವಿಧಿ ತಿದ್ದುಪಡಿ ವಿಷಯಗಳನ್ನು ಸರ್ವಾನುಮತದಿಂದ ಅನುಮೋದಿಸಿರುವುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರಿಗೆ ಉತ್ಸಾಹ ನೀಡಿದೆ. ಹೊಸ ಹುರುಪು ನೀಡಿದೆ. ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯದ ನೂತನ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರನ್ನು, ಕೇಂದ್ರ ಸಚಿವರಾದ ಶ್ರೀ ಅನಂತ ಕುಮಾರ್‌ರವರನ್ನು ಹಾಗೂ ಶ್ರೀ ಅನಂತ ಕುಮಾರ ಹೆಗಡೆಯವರನ್ನು ಖುದ್ದಾಗಿ ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಗೆ ಬರಬೇಕೆಂದು ವಿನಂತಿಸಲಾಗಿತ್ತು, ಬರುವುದಾಗಿ ಒಪ್ಪಿದ್ದರು. ನಂತರ ಕಾರಣಾಂತರಗಳಿಂದ ಇವರುಗಳು ಸಭೆಗೆ ಬರಲು ಸಾಧ್ಯವಾಗಿರುವುದಿಲ್ಲ. ಆದರೆ, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಅಗತ್ಯವಾಗುವ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ಶ್ರೀ ಅನಂತ ಕುಮಾರ್‌ರವರು ಲಿಖಿತ ಸಂದೇಶ ಕಳುಹಿಸಿದ್ದಾರೆ. ಅವರುಗಳಿಗೆ ಸಾಮಾನ್ಯ ಸಭೆಯ ಪರವಾಗಿ, ಆಡಳಿತ ಮಂಡಲಿಯವರ ಪರವಾಗಿ ಧನ್ಯವಾದಗಳು.

ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಸಹಕಾರಿಗಳ ಹಾಜರಾತಿ ಕೇವಲ 857. ಸಂಯುಕ್ತ ಸಹಕಾರಿಯ ಒಟ್ಟು 4134 ಸದಸ್ಯರಲ್ಲಿ ಭಾಗವಹಿಸಲು ಅರ್ಹತೆ ಹೊಂದಿದ್ದ ಸಹಕಾರಿಗಳ ಸಂಖ್ಯೆ 2604. ಸದಸ್ಯರ ಹಾಜರಾತಿ ಇನ್ನೂ ಹೆಚ್ಚುವುದು ಅಗತ್ಯ. 1/3 ಭಾಗದಷ್ಟು ಸಹಕಾರಿಗಳು ಮಾತ್ರ ಭಾಗವಹಿಸಿದ್ದಾರೆ. ಈ ಸಂಖ್ಯೆ ಇನ್ನೂ ಹೆಚ್ಚಾಗಬೇಕು ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಅಪೇಕ್ಷಿಸುತ್ತದೆ.

ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವೇಗ ಹಾಗೂ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಹಲವಾರು ಕ್ರಮಗಳನ್ನು ಆದ್ಯತೆಯ ಮೇಲೆ ನಿರ್ವಹಿಸುವ ನಿಟ್ಟಿನಲ್ಲಿ ನೂತನ ಆಡಳಿತ ಮಂಡಲಿ ಕ್ರಮವಿಡಲು ಬದ್ಧವಾಗಿದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಹಕಾರ ಹಾಗೂ ನೆರವಿನಿಂದ ಈ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತೇವೆ ಎಂಬ ಭರವಸೆ ನಮಗಿದೆ. ನಿಮ್ಮ ಸಲಹೆ ಹಾಗೂ ಮಾರ್ಗದರ್ಶನವನ್ನು ಅಪೇಕ್ಷಿಸುತ್ತೇನೆ.

▸▸ ಬಿ.ಹೆಚ್. ಕೃಷ್ಣಾರೆಡ್ಡಿ, ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು



**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop


## ಒಳಪುಟಗಳಲ್ಲಿ . . .


ಸಹಕಾರ ಸ್ಫೂರ್ತಿಯನ್ನು ಜೀವಂತವಾಗಿರಿಸಬೇಕು ಮತ್ತು ಅದನ್ನು ಇನ್ನಷ್ಟು ಬಲಗೊಳಿಸಬೇಕು : ಪ್ರಧಾನಿ ಶ್ರೀ ನರೇಂದ್ರ ಮೋದಿ ........ 5

ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ ........ 7

ದಿನಾಂಕ : 14-11-2017 ರಿಂದ 20-11-2017ರವರೆಗೆ 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ..... 12

ವಿವಿಧ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕರಗಳ ಭೇಟಿ ........ 21

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಜರುಗಿರುವ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು ........ 25

"ಆ ಎರಡು ಪದಗಳು" ........ 31

ಸಾಮಾಜಿಕ ಬದಲಾವಣೆಯಲ್ಲಿ ಸಹಕಾರದ ಪಾತ್ರ ....... 33


# ಸಂಪಾದಕೀಯ

## ನಿರ್ದೇಶಕರಿಗೆ ಪ್ರಮಾಣ ವಚನ ಭೋಧನೆ ನೈತಿಕತೆಯ ಪಾಠ – ಪಾರದರ್ಶಕತೆ ಹಾಗೂ ಕಾರ್ಯಕ್ಷಮತೆ ಹೆಚ್ಚಿಸಲು ಸಾಧ್ಯ

ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದ ನೂತನ ಆಡಳಿತ ಮಂಡಲಿಯ ಸದಸ್ಯರು ಸದಸ್ಯ ಸಹಕಾರಿಗಳ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿರುವುದು ಸ್ವಾಗತಾರ್ಹವಾಗಿದೆ. ಸಂಯುಕ್ತ ಸಹಕಾರಿಯ ಉದ್ದೇಶಿತ ಉಪವಿಧಿಗಳ ತಿದ್ದುಪಡಿಗಳಲ್ಲೂ ಈ ಬಗ್ಗೆ ಪ್ರಸ್ತಾವನೆಯಾಗಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ನೈತಿಕತೆಯನ್ನು ಹೆಚ್ಚಿಸುವುದರಲ್ಲಿ, ಪಾರದರ್ಶಕತೆ ಹಾಗೂ ಕಾರ್ಯಕ್ಷಮತೆ ಹೆಚ್ಚಿಸುವುದು ಅತ್ಯಂತ ಅಗತ್ಯವಾದ ವಿಷಯ.

1959ರ ಸಹಕಾರ ಸಂಘಗಳ ಕಾಯ್ದೆಯಲ್ಲಿಯೂ ಸಹ ನಿರ್ದೇಶಕರುಗಳಿಗೆ, ಪದಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ನೀತಿ ಸಂಹಿತೆ ರೂಪಿಸುವುದು ವಾರ್ಷಿಕ ಮಹಾಸಭೆಯ ವಿಷಯವಾಗಿದೆ.

1997ರ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿಯೂ ಸಹ ಪ್ರಕಾರ ಸಂಯುಕ್ತ ಸಹಕಾರಿಯು ಎಲ್ಲಾ ಸದಸ್ಯ ಸಹಕಾರಿಗಳ ಆಡಳಿತ ಮಂಡಲಿಯವರಿಗೆ, ಪದಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ನಡತೆ/ನೀತಿ ಸಂಹಿತೆಯನ್ನು ರೂಪಿಸಬೇಕೆಂದು ತಿಳಿಸಿದಂತೆ ಪ್ರಪ್ರಥಮ ಬಾರಿಗೆ ಹಿರಿಯ ಸದಸ್ಯರಾದ ಶ್ರೀ ರಾವಾಸಾಹೇಬ ಅಣ್ಣಾಸಾಹೇಬ ಪಾಟೀಲರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನೂತನ ಆಡಳಿತ ಮಂಡಲಿಯ ಸದಸ್ಯರಿಗೆ ಹಾಗೂ ಪದಾಧಿಕಾರಿಗಳಿಗೆ ಪ್ರಮಾಣ ವಚನ ಭೋಧನೆ ಮಾಡಿ ರಾಜ್ಯದ ಎಲ್ಲಾ ಸಹಕಾರಿಗಳಿಗೆ ಮೇಲ್ಪಂಕ್ತಿ ಹಾಕಿದ್ದಾರೆ. ಈ ಕ್ರಮದಿಂದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳ ಮನಸ್ಸಿನಲ್ಲಿ ಒಂದು ಹೊಸತನದ ಅನುಭವವಾಗಿ ನೈತಿಕತೆಯ ಜಾಗೃತಿಯಾಗಿದೆ. ತಮ್ಮ ಕರ್ತವ್ಯಗಳ ಕಡೆಗೆ ಗಮನ, ತಮ್ಮ ಜವಾಬ್ದಾರಿಗಳ ಪರಿಣಾಮಕಾರಿ ನಿರ್ವಹಣೆಗೆ ಚಿಂತನೆಗೆ ಅವಕಾಶ ಹಾಗೂ ಅವರುಗಳ ಕಾರ್ಯಕ್ಷಮತೆ ಹೆಚ್ಚಿಸಲು ಇದರಿಂದ ಸಾಧ್ಯವಾಗಬಹುದಾಗಿದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸಹ ತಮ್ಮ ಉಪವಿಧಿಗಳಲ್ಲಿ ಪ್ರತಿ ಬಾರಿಯೂ ನೂತನ ಆಡಳಿತ ಮಂಡಲಿಯವರಿಗೆ ಪ್ರಮಾಣ ವಚನ ಸ್ವೀಕರಿಸುವ ವ್ಯವಸ್ಥೆಯನ್ನು ತಿದ್ದುಪಡಿಗಳಲ್ಲಿ ಅಳವಡಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ಈ ಕ್ರಮದಿಂದಾಗಿ ಸೌಹಾರ್ದ ಸಹಕಾರಿ ಕ್ಷೇತ್ರ ಇಡೀ ದೇಶದ ಸಹಕಾರ ಕ್ಷೇತ್ರದಲ್ಲಿ ಮಾದರಿ ಎನಿಸಬಹುದಾಗಿದೆ.

ನೂತನ ನಿರ್ದೇಶಕರು ಆಯ್ಕೆಯಾದ ನಂತರ ಜರುಗುವ ಆಡಳಿತ ಮಂಡಲಿ ಸಭೆಯಲ್ಲಿ ಅಥವಾ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತಾವುಗಳು ಸಹಕಾರ ತತ್ವಗಳನ್ನು ಪ್ರಚುರಪಡಿಸಲು ತಮಗೆ ನಿಗದಿಪಡಿಸಿದ ಅಧಿಕಾರ ಹಾಗೂ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಪಾರದರ್ಶಕವಾಗಿ, ಪ್ರಾಮಾಣಿಕವಾಗಿ, ಶ್ರದ್ಧೆ ಮತ್ತು ನಿಷ್ಠೆಯಿಂದ ಹಾಗೂ ನಿಸ್ವಾರ್ಥತೆಯಿಂದ ಕಾರ್ಯನಿರ್ವಹಿಸುತ್ತೇನೆಂದು ಮತ್ತು ಭಾರತದ ಸಂವಿಧಾನದ ಆಶಯದಂತೆ ಸಹಕಾರಿ ಸಂಸ್ಥೆಯನ್ನು ಸ್ವಾಯತ್ತ/ ಸ್ವಯಂ ನಿಯಂತ್ರಣದ ಸಂಸ್ಥೆಯಂತೆ ಕಾರ್ಯನಿರ್ವಹಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವ ಪ್ರಯತ್ನವನ್ನು ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ಮಾಡುವಿರಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸಿದೆ. ■

प्रधान मंत्री कार्यालय
**Prime Minister's Office**

नई दिल्ली- 110011
New Delhi- 110011

Sub:Petition of SHRI B.H. KRISHNAREDDY
KARNATAKA STATE SOUHARDA FEDERAL COOPERATIVE LTD.
NIRMANA BHAVAN, DR. RAJKUMAR ROAD
IST BLOCK, RAJAJINAGAR
BENGALURU (BANGALORE) RURAL
KARNATAKA-560010

A letter/gist of oral representation dated 22/09/2017 received in this office from SHRI B.H. KRISHNAREDDY is forwarded herewith for action as appropriate. Reply may be sent to the Petitioner and a copy of the same may be uploaded on the portal.

[SAMIR KUMAR]
SECTION OFFICER

SECRETARY,DEPARTMENT OF FINANCIAL SERVICES (BANKING DIVISION)

---

PMO ID No.:PMOPG/D/2017/0452231 Dated: 25/09/2017

Copy for information to :
SHRI B.H. KRISHNAREDDY
KARNATAKA STATE SOUHARDA FEDERAL COOPERATIVE LTD.
NIRMANA BHAVAN, DR. RAJKUMAR ROAD
IST BLOCK, RAJAJINAGAR
BENGALURU (BANGALORE) RURAL
KARNATAKA-560010

Note:- Status of the grievance can be tracked through internet at http://pgportal.gov.in/ViewStatus.aspx by entering registration no. PMOPG/D/2017/0452231

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಐ.ಎಸ್.ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ**
**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560010.**
www.souharda.coop, Ph: 080-23378375-80, Email:souharda@souharda.coop

### ಸಿಬ್ಬಂದಿಗಳ ನೇಮಕಾತಿ ಜಾಹೀರಾತು

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಮಾತೃ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಕ್ರೋಢೀಕೃತ ವೇತನದ ಆಧಾರದಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಳಗಾವಿ, ಕಲಬುರಗಿ, ಬೆಂಗಳೂರು ಮತ್ತು ಮೈಸೂರು ವಿಭಾಗೀಯ ಕಛೇರಿಗಳಿಗೆ ಸಿಬ್ಬಂದಿಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಕಾನೂನು ಅಧಿಕಾರಿಗಳು – 05, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು (ಕಿರಿಯ ಅಧಿಕಾರಿ ಶ್ರೇಣಿ) – 10, ಲೆಕ್ಕಾಧಿಕಾರಿಗಳು (ಕಿರಿಯ ಅಧಿಕಾರಿ ಶ್ರೇಣಿ) – 08, ಸಹಾಯಕರು – 06 ಈ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ಹಾಗೂ ಸಹಾಯಕರ ಹುದ್ದೆಗೆ ಕನಿಷ್ಠ ವಿದ್ಯಾರ್ಹತೆ – ಕರ್ನಾಟಕದ ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದಾದರೂ ವಿಷಯದಲ್ಲಿ ಪದವಿ, ಲೆಕ್ಕಾಧಿಕಾರಿಗಳ ಹುದ್ದೆಗೆ – ಕನಿಷ್ಠ ವಿದ್ಯಾರ್ಹತೆ ಕರ್ನಾಟಕದ ಅಂಗೀಕೃತ ವಿಶ್ವವಿದ್ಯಾಲಯದಿಂದ ವಾಣಿಜ್ಯ ಪದವಿ ಹಾಗೂ ಕಾನೂನು ಅಧಿಕಾರಿಗಳ ಹುದ್ದೆಗೆ ಕನಿಷ್ಠ ವಿದ್ಯಾರ್ಹತೆ – ಕರ್ನಾಟಕದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ. ಆಸಕ್ತರು ತಮ್ಮ ವಿದ್ಯಾರ್ಹತೆ, ಅನುಭವ ವಿವರಗಳಿರುವ ವೈಯಕ್ತಿಕ ವಿವರಗಳನ್ನು ಸಂಯುಕ್ತ ಸಹಕಾರಿಯ ಇ–ಮೇಲ್ ವಿಳಾಸ souharda@souharda.coop ಹಾಗೂ ಸಂಯುಕ್ತ ಸಹಕಾರಿಯ 4 ವಿಭಾಗೀಯ ಕಛೇರಿಗಳಾದ ಬೆಳಗಾವಿ ವಿಭಾಗ – dobgm@souharda.coop, ಕಲಬುರಗಿ ವಿಭಾಗ – glbdo@souharda.coop, ಬೆಂಗಳೂರು ವಿಭಾಗ - bgudo@souharda.coop, ಮೈಸೂರು ವಿಭಾಗ – mysdo@souharda.coopಗೆ ಇ–ಮೇಲ್ ಹಾಗೂ ಪತ್ರದ ಮೂಲಕ ಮೇಲಿನ ವಿಳಾಸಕ್ಕೆ ಅರ್ಜಿಗಳನ್ನು ಕಳುಹಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 21 ಅಕ್ಟೋಬರ್ 2017. ಹೆಚ್ಚಿನ ಮಾಹಿತಿಗಾಗಿ www.souharda.coop ಹಾಗೂ ಶ್ರೀ ಪಾಲರಾಜ್, ಮೊಬೈಲ್ ಸಂಖ್ಯೆ 8884466718 ಇವರನ್ನು ಸಂಪರ್ಕಿಸುವುದು.

# ಸಹಕಾರ ಸ್ಫೂರ್ತಿಯನ್ನು ಜೀವಂತವಾಗಿರಿಸಬೇಕು ಮತ್ತು ಅದನ್ನು ಇನ್ನಷ್ಟು ಬಲಗೊಳಿಸಬೇಕು : ಪ್ರಧಾನಿ ಶ್ರೀ ನರೇಂದ್ರ ಮೋದಿ

**ದೆಹಲಿ :** ಇತ್ತೀಚೆಗೆ ದೆಹಲಿಯಲ್ಲಿ ಆಯೋಜಿಸಲಾಗಿದ್ದ ಮಹಾರಾಷ್ಟ್ರದ ಸಹಕಾರಿ ಧುರೀಣ ಶ್ರೀ ಲಕ್ಷ್ಮಣ ಮಾಧವರಾವ್ ಇನಾಮದಾರ್ ಅವರ ಜನ್ಮಶತಾಬ್ದಿ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀ ಮೋದಿಯವರು, 2022ರ ವೇಳೆಗೆ ರೈತರು ತಮ್ಮ ಆದಾಯವನ್ನು ಇಮ್ಮಡಿ ಗೊಳಿಸಿಕೊಳ್ಳುವಲ್ಲಿ ನೆರವಾಗಲು ಜೇನು ಸಾಕಣೆ ಮತ್ತು ಸಮುದ್ರ ಕಳೆ ಕೃಷಿಯಂತಹ ನೂತನ ಉದ್ಯಮ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವಂತೆ ಮತ್ತು ಗ್ರಾಮೀಣ ಆರ್ಥಿಕತೆಯನು ಹೆಚ್ಚಿಸುವಂತೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಸಹಕಾರಿ ನಾಯಕರಿಗೆ ಕರೆ ಕೊಟ್ಟಿದ್ದಾರೆ.

'ಸಹಕಾರಿ ಸ್ಫೂರ್ತಿ'ಯನ್ನು ಜೀವಂತವಾಗಿರಿಸಬೇಕು ಮತ್ತು ಅದನ್ನು ಇನ್ನಷ್ಟು ಬಲಗೊಳಿಸಬೇಕು ಎಂದು ಅವರು ಒತ್ತಿ ಹೇಳಿದರು. ಭಾರತದಲ್ಲಿ ಸಹಕಾರಿ ಕ್ಷೇತ್ರವು ಬೆಳವಣಿಗೆ ಹೊಂದಿ ಮಿಂಚುವುದು ಸಹಜವಾಗಿದೆ. ಧನಾತ್ಮಕ ಬದಲಾವಣೆಗಳನ್ನು ತರುವಲ್ಲಿ ಸಹಕಾರಿ ರಂಗವು ನೆರವಾಗಬಹುದಾದ ಹಲವಾರು ಕ್ಷೇತ್ರಗಳಿವೆ ಎಂದರು.

ಸಹಕಾರಿ ಆಂದೋಲನದ ಮೂಲಕ 2022ರ ವೇಳೆಗೆ ರೈತರ ಆದಾಯವನ್ನು ಹೇಗೆ ಇಮ್ಮಡಿಗೊಳಿಸಬಹುದು ಎಂಬ ಬಗ್ಗೆ ಚಿಂತನೆ ನಡೆಸುವಂತೆ ಸಹಕಾರಿ ಸಂಘಗಳಿಗೆ ಸೂಚಿಸಿದ ಅವರು, ಅಭಿವೃದ್ಧಿಯ ಪಥದಲ್ಲಿ ಗ್ರಾಮೀಣ ಭಾರತವು ಹಿಂದುಳಿಯಬಾರದು ಎಂದು ಒತ್ತಿ ಹೇಳಿದರು.

ರೈತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದ ಅವರು, ರೈತರು ಸಗಟು ದರದಲ್ಲಿ ಖರೀದಿ ಮತ್ತು ಮಾರಾಟ ಮಾಡುವಂತಾಗಲು ವ್ಯವಸ್ಥೆಯೊಂದನ್ನು ರೂಪಿಸುವ ಅಗತ್ಯವಿದೆ. ಇಂದು ರೈತರು ತಮಗೆ ಅಗತ್ಯ ಕೃಷಿ ಸಾಮಗ್ರಿಗಳನ್ನು ಚಿಲ್ಲರೆ ದರಗಳಲ್ಲಿ ಖರೀದಿಸುತ್ತಿದ್ದಾರೆ ಮತ್ತು ತಮ್ಮ ಉತ್ಪನ್ನಗಳನ್ನು ಸಗಟು ದರಗಳಲ್ಲಿ ಮಾರಾಟ ಮಾಡುತ್ತಿದ್ದಾರೆ.

ಇದನ್ನು ಅದಲು – ಬದಲು ಮಾಡಲು ಸಾಧ್ಯವಿಲ್ಲವೇ? ರೈತರು ಕೃಷಿಗೆ ಅಗತ್ಯ ಸಾಮಗ್ರಿಗಳನ್ನು ಸಗಟು ದರಗಳಲ್ಲಿ ಖರೀದಿಸಿ ತಮ್ಮ ಉತ್ಪನ್ನಗಳನ್ನು ಚಿಲ್ಲರೆ ದರಗಳಲ್ಲಿ ಮಾರಾಟ ಮಾಡಿದರೆ ಯಾವ ಮಧ್ಯವರ್ತಿಯೂ ಸಹ ಅವರನ್ನು ಮೋಸ ಮಾಡಲು / ವಂಚಿಸಲು ಸಾಧ್ಯವಿಲ್ಲ ಎಂದರು. ಸಹಕಾರಿ



ಡೇರಿಗಳೊಂದಿಗೆ ಗುರುತಿಸಿಕೊಂಡಿರುವ ರೈತರು ಈ ತತ್ತ್ವವನ್ನು ಅನುಸರಿಸಿ ಅಭಿವೃದ್ಧಿಗೊಂಡಿರುವುದನ್ನು ಅವರು ವಿಶೇಷ ಪ್ರಸ್ತಾಪ ಮಾಡಿದರು.

ಸಹಕಾರಿ ರಂಗವು ಮುಖ್ಯವಾಗಿ ಸಕ್ಕರೆ ಮತ್ತು ಹೈನುಗಾರಿಕೆ ಕ್ಷೇತ್ರಗಳಿಗೆ ಸೀಮಿತವಾಗಿದೆ ಎಂದ ಅವರು, ಸಹಕಾರಿ ವ್ಯವಸ್ಥೆಯು ನಮ್ಮ ದೇಶಕ್ಕೆ ಸೂಕ್ತವಾಗಿದೆ ಮತ್ತು ಹೊಸ ಉದ್ಯಮಗಳತ್ತ ಅದು ಗಮನ ಹರಿಸಬೇಕಾದ ಅಗತ್ಯವಿದೆ ಎಂದರು.

ರೈತರಿಗೆ ನೆರವಾಗಲು ಸಹಕಾರಿ ರಂಗವು ತೊಡಗಿಕೊಳ್ಳಬಹುದಾದ ವಿವಿಧ ಕ್ಷೇತ್ರಗಳನ್ನು ಉದಾಹರಿಸಿದ ಪ್ರಧಾನಿ, ಯೂರಿಯಾ ಗೊಬ್ಬರದ ಲೇಪನದಲ್ಲಿ ಬಳಕೆಯಾಗುವ ಬೇವಿನ ಎಣ್ಣೆಗೆ ಹೆಚ್ಚಿನ ಬೇಡಿಕೆಯಿದ್ದು, ಅದರ ತಯಾರಿಕೆಗೆ ಅಗತ್ಯವಾಗಿರುವ ಕಚ್ಚಾ ವಸ್ತುಗಳನ್ನು ರೈತಾಪಿ ಮಹಿಳೆಯರು ಸಂಗ್ರಹಿಸಬಹುದಾಗಿದೆ. ಅದೇ ರೀತಿ ಜೇನು ಸಾಕಣೆಯನ್ನು ಕೈಗೊಳ್ಳುವ ಮೂಲಕ ರೈತರು 'ಸಿಹಿ ಕ್ರಾಂತಿ'ಯನ್ನು ತರಬಹುದಾಗಿದೆ. ಮೀನುಗಾರರು ಕೆಲಸವಿಲ್ಲದ ದಿನಗಳಲ್ಲಿ ಸಮುದ್ರ ಕಳೆ ಕೃಷಿಯಲ್ಲಿ ತೊಡಗಿಕೊಳ್ಳಬಹುದು. ಸಮುದ್ರ ಕಳೆಗೆ ಔಷಧಿ ತಯಾರಿಕೆ ಕ್ಷೇತ್ರದಲ್ಲಿ ಭಾರೀ ಬೇಡಿಕೆಯಿದ್ದು, ಅದರ ರಸವು ಮಣ್ಣಿನ ಆರೋಗ್ಯವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2103 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 1117 ಪ್ರಕರಣಗಳು ಸೇರಿದಂತೆ ಒಟ್ಟು 3220 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2229 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 451 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 12 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 367 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 09 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಸಂಯುಕ್ತ ಸಹಕಾರಿಯ ನಿಯೋಗದಿಂದ ಭೇಟಿ

# ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ಬಾಧೆ ನಿವಾರಣೆಗೆ ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿಯವರಲ್ಲಿ ಸಂಯುಕ್ತ ಸಹಕಾರಿಯ ನಿಯೋಗ



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ಮಾಜಿ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್, ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಎನ್.ಸಿ.ಡಿ.ಸಿ.ಯ ನಿರ್ದೇಶಕರಾದ ಶ್ರೀ ಮಂಜಪ್ಪ ಹೊಸಬಾಳೆಯವರೊಂದಿಗೆ ದಿನಾಂಕ 21.09.2017ರಂದು ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿಯವರನ್ನು ಭೇಟಿ ಮಾಡಿ ಕ್ರೆಡಿಟ್ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿ ಸಂಸ್ಥೆಗಳು ಆದಾಯ ತೆರಿಗೆಯ ಬಾಧೆಗಳನ್ನು ವಿವರಿಸಿದರು. ಹಣಕಾಸು ಸಚಿವರು ಶೀಘ್ರದಲ್ಲಿ ಈ ಸಮಸ್ಯೆಗಳನ್ನು ಪರಿಹರಿಸಲು ಕ್ರಮವಿಡುವುದಾಗಿ ಭರವಸೆ ನೀಡಿದರು.

# ಸೌಹಾರ್ದ ಸಹಕಾರಿಗಳ ಹಾಗೂ ಸಹಕಾರಿ ಸಂಸ್ಥೆಗಳ ಹಿತರಕ್ಷಣೆಗೆ ಬದ್ಧ- ಸಂಯುಕ್ತ ಸಹಕಾರಿಯ ನಿಯೋಗಕ್ಕೆ ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ರಾಜ್ಯ ಸಚಿವರಾದ ಶ್ರೀ ಅನಂತಕುಮಾರ ಹೆಗಡೆರವರ ಭರವಸೆ

ಸಹಕಾರ ಸಂಸ್ಥೆಗಳ ಆದಾಯ ತೆರಿಗೆ ಬಾಧೆಗಳ ನಿವಾರಣೆಗೆ ಕೇಂದ್ರ ಹಣಕಾಸು ಸಚಿವರಲ್ಲಿ ತೆರಳಿದ ನಿಯೋಗವು ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಸಚಿವರಾದ ಶ್ರೀ ಅನಂತಕುಮಾರ ಹೆಗಡೆಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಶ್ರೀ ಅನಂತಕುಮಾರ ಹೆಗಡೆಯವರು ಈ ವಿಷಯವಾಗಿ ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡಿ ತೊಂದರೆಗಳ ನಿವಾರಣೆಗೆ ಪ್ರಯತ್ನಿಸುವುದಾಗಿ ತಿಳಿಸಿದರು.



# ಕರ್ನಾಟಕ ಮಾದರಿಯ ಸ್ವಾಯತ್ತ ಕಾಯ್ದೆ ಜಾರಿಗೆ ಪ್ರಯತ್ನ – ಶ್ರೀ ಚಂದ್ರಪಾಲ್‌ಸಿಂಗ್ ಯಾದವ್



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ಮಾಜಿ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಚಂದ್ರಪಾಲ್‌ಸಿಂಗ್ ಯಾದವ್‌ರವರನ್ನು ಭೇಟಿ ಮಾಡಿ ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು.

ಶ್ರೀಯುತರು ಸ್ವಾಯತ್ತ ಸಹಕಾರಿ ಕಾಯ್ದೆ ಜಾರಿಯಿರುವ ರಾಜ್ಯಗಳಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, ಸಂಯುಕ್ತ ಸಹಕಾರಿ ವ್ಯವಸ್ಥೆ ಹಾಗೂ ಚಳುವಳಿಯ ಕಾರ್ಯಚಟುವಟಿಕೆಗಳು ಬಹಳ ಉತ್ತಮವಾಗಿವೆ. ಅನುಕರಣೆಗೆ ಯೋಗ್ಯವಾಗಿದೆ. ಈಗ 9 ರಾಜ್ಯಗಳಲ್ಲಿ ಈ ಚಳುವಳಿ ಜಾರಿಯಲ್ಲಿದೆ. ಉಳಿದ ರಾಜ್ಯಗಳಲ್ಲೂ ಈ ಕಾಯ್ದೆ ಜಾರಿಗೆ ಪ್ರಯತ್ನಿಸುವುದಾಗಿ ತಿಳಿಸಿದರು.




**ನವದೆಹಲಿ :** ದಿನಾಂಕ 20 ಸೆಪ್ಟೆಂಬರ್ 2017ರಂದು ನಡೆದ ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ವಾರ್ಷಿಕ ಮಹಾಸಭೆಯಲ್ಲಿ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಭಾಗವಹಿಸಿ, ಸಹಕಾರಿಗಳಿಗೆ ಆಗುತ್ತಿರುವ ತೊಂದರೆಗಳ ಕುರಿತು ಮಾತನಾಡಿದರು.

## ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆ ಗಣನೀಯವಾಗಿದೆ - ಹೈದರಾಬಾದ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ವಿಚಾರಗೋಷ್ಠಿಯಲ್ಲಿ ಶ್ರೀ ಗುರುನಾಥ ಜ್ಯಾಂತಿಕರ




ಹೈದರಾಬಾದ್‌ನಲ್ಲಿ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರ ನೇತೃತ್ವದಲ್ಲಿ ದಿನಾಂಕ 14, 15 ಸೆಪ್ಟೆಂಬರ್ 2017ರಂದು ನಡೆದ ಅಂತರ ರಾಷ್ಟ್ರೀಯ ವಿಚಾರ ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಭಾಗವಹಿಸಿ, ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡುವುದರಿಂದ ಸಹಕಾರಿ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧ್ಯ ಎನ್ನುವುದಕ್ಕೆ ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಹಾಗೂ ಸಂಯುಕ್ತ ಸಹಕಾರಿಯ ಮೇಲ್ವಿಚಾರಣೆಯಲ್ಲಿ ಇದುವರೆಗಿನ ಪ್ರಗತಿ ಕುರಿತು ವಿವರಣೆ ನೀಡಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕ ನಿರುದ್ಯೋಗ ನಿವಾರಣೆಯಾಗುತ್ತಿದೆ. ಯುವಕರಲ್ಲಿ ಸಹಕಾರಿ ನಾಯಕತ್ವ ಅರಳುತ್ತಿದೆ. ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ ಮೂಡುತ್ತಿದೆ. ಸೌಹಾರ್ದ ಸಹಕಾರಿಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಾಂಪ್ರದಾಯಿಕ ಸಹಕಾರಿ ಸಂಸ್ಥೆಗಳ ಕಾಯ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳಿಗಿಂತ ಭಿನ್ನವಾಗಿವೆ ಎಂದು ತಿಳಿಸಿದರು.

### ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ :

## ಅಭಿನಂದನಾ ಕಾರ್ಯಕ್ರಮ ಹಾಗೂ ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಬಿಡುಗಡೆ


ಉದ್ಘಾಟನಾ ಕಾರ್ಯಕ್ರಮ

## ಸೌಹಾರ್ದ ಸಹಕಾರಿ ಅಭಿವೃದ್ಧಿಗೆ ಸಂಘಟಿತ ಹೋರಾಟ ಅವಶ್ಯಕ : ಶ್ರೀ ಬಸನಗೌಡ ಪಾಟೀಲ್ ಯತ್ನಾಳ

**ಬೆಂಗಳೂರು :** ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದ ಕಾರ್ಯಕ್ರಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಸಹಕಾರ ಕ್ಷೇತ್ರದಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿ ಭಾಜಕರಿಗೆ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳಾಗಿ ಆಯ್ಕೆಯಾದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಗೌರವಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಕೇಂದ್ರ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರು ಮತ್ತು ವಿಜಯಪುರದ ಸಿದ್ಧಸಿರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸನಗೌಡ ಪಾಟೀಲ್ ಯತ್ನಾಳರವರು ನೆರವೇರಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಸಂಯುಕ್ತ ಸಹಕಾರಿಯ ಮಾರ್ಗದರ್ಶನದಲ್ಲಿ ಉತ್ತಮ ಸಾಧನೆಯನ್ನು ಮಾಡುತ್ತಲಿದೆ. ಸೌಹಾರ್ದ ಸಹಕಾರಿ ಕಾಯ್ದೆಯ ಇತ್ತೀಚಿನ ಕೆಲವು ತಿದ್ದುಪಡಿಗಳು ಈ ಚಳುವಳಿಯ ಆಶಯವನ್ನೇ ಮರೆತು ಎಲ್ಲವನ್ನು ಸರಕಾರದ ನಿಯಂತ್ರಣಕ್ಕೆ ಒಳಪಡಿಸುತ್ತಿರುವುದು ಸಲ್ಲದು. ಅದರಂತೆ



ಕೇಂದ್ರದ ಆದಾಯ ತೆರಿಗೆ ಕಾಯ್ದೆಗಳಲ್ಲಿನ ಬದಲಾವಣೆಗಳು ಸಹಕಾರ ಕ್ಷೇತ್ರವನ್ನು ಬಾಧಿಸುತ್ತಿವೆ. ಇವೆಲ್ಲವುಗಳ ಪರಿಹಾರಕ್ಕಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಂಘಟಿತ ಹೋರಾಟ ಅಗತ್ಯ ಎಂದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪ್ರಕಟಣೆಗಳನ್ನು ಬಿಡುಗಡೆ ಮಾಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಹಾಗೂ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಸನ್ಮಾನ ಮಾಡಿದರು. ಸಂಯುಕ್ತ ಸಹಕಾರಿಯ ಎಲ್ಲಾ ನಿರ್ದೇಶಕರು ಈ ಸಂದರ್ಭದಲ್ಲಿ ಭಾಗಿಯಾಗಿದ್ದರು.



ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್‌ರವರು ಗಣ್ಯರನ್ನು ಸ್ವಾಗತಿಸಿ, ಈ ದಿನ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಸಹಕಾರಿ ಗಣ್ಯರುಗಳಾದ ಕರ್ನಾಟಕ ಸರಕಾರದ 2016ನೇ ಸಾಲಿನ "ಸಹಕಾರ ರತ್ನ" ಪ್ರಶಸ್ತಿ ಪುರಸ್ಕೃತರಾದ ಶ್ರೀ ಎಸ್. ಆರ್.ಲಕ್ಷ್ಮೀಕಾಂತ ರೆಡ್ಡಿಯವರನ್ನು, ಇಫ್ಕೋ "ಸಹಕಾರ ಬಂಧು" ಪ್ರಶಸ್ತಿ ಪುರಸ್ಕೃತರಾದ ಶ್ರೀ ರಮೇಶ ವೈದ್ಯರವರನ್ನು, ನೂತನವಾಗಿ ಪ್ರಾರಂಭವಾಗಿರುವ ಶ್ರೀ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಮುಂಬೈನಲ್ಲಿರುವ ಟೆಕ್ಸೈಲ್ ಇಂಪೋರ್ಟ್ ಮತ್ತು ಎಕ್ಸ್‌ಪೋರ್ಟ್ ಸಹಕಾರಿ ಸಂಸ್ಥೆಯ ಪದಾಧಿಕಾರಿಯಾಗಿ ಆಯ್ಕೆಯಾಗಿರುವ ಶ್ರೀ ಆರ್.ಎನ್.ದೇಶಪಾಂಡೆ ಇವರುಗಳನ್ನು ಗೌರವಿಸಲಾಗುತ್ತಿದೆ ಎಂದು ತಿಳಿಸಿ, ಅವರುಗಳನ್ನು ಸಭೆಗೆ ಪರಿಚಯಿಸಿದರು. ಜೊತೆಗೆ ಕೇಂದ್ರ ಸಚಿವರುಗಳಾದ ಶ್ರೀ ಅನಂತ ಕುಮಾರ್, ಶ್ರೀ ಅನಂತಕುಮಾರ ಹೆಗಡೆ, ರಾಜ್ಯದ ನೂತನ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರನ್ನು ಆಮಂತ್ರಿಸಲಾಗಿತ್ತು. ಕಾರಣಾಂತರಗಳಿಂದ ಅವರುಗಳು ಬರಲಾಗಿಲ್ಲ. ಶ್ರೀ ಅನಂತ ಕುಮಾರ್‌ರವರು ಪತ್ರವನ್ನು ಕಳುಹಿಸಿದ್ದಾರೆ ಎಂದು ತಿಳಿಸಿದರು. ಪತ್ರವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಭೆಯಲ್ಲಿ ಓದಿದರು. ನಂತರ ಸಹಕಾರಿ ಗಣ್ಯರನ್ನು ಸಂಯುಕ್ತ ಸಹಕಾರಿಯ ಪರವಾಗಿ ಅಭಿನಂದಿಸಲಾಯಿತು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ವಂದನೆ ಸಲ್ಲಿಸಿದರು.



ಅಭಿನಂದನಾ ಕಾರ್ಯಕ್ರಮ



ಪ್ರಕಟಣೆಗಳ ಬಿಡುಗಡೆ

## ಉತ್ತಮ ವ್ಯವಸ್ಥೆಗಳಿಂದ, ವಿಜೃಂಭಣೆಯಿಂದ ಜರುಗಿದ ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ

## ಅಧ್ಯಕ್ಷರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಮಂತ್ರ : ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ವೇಗ ಹಾಗೂ ದಕ್ಷತೆಯ ಭರವಸೆ : ಸದಸ್ಯರ ಉತ್ತಮ ಪಾಲ್ಗೊಳ್ಳುವಿಕೆ; ಉಪವಿಧಿಗಳ ತಿದ್ದುಪಡಿ ಸೇರಿದಂತೆ ಅನೇಕ ಮಹತ್ವದ ನಿರ್ಣಯಗಳು



ಸ್ವಾಗತ ಭಾಷಣ

ದಿನಾಂಕ : 16.09.2017ರಂದು ನಗರದ ಅರಮನೆ ಮೈದಾನದಲ್ಲಿ ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯು ಅತ್ಯಂತ ವಿಜೃಂಭಣೆಯಿಂದ ಜರುಗಿತು. ಪ್ರಾರಂಭದಲ್ಲಿ ಶ್ರೀಮತಿ ಸಹನಾರವರಿಂದ ಪ್ರಾರ್ಥನೆ, ನಂತರದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಸ್ವಾಗತ ಹಾಗೂ ನೂತನ ಆಡಳಿತ ಮಂಡಲಿಯ ಸದಸ್ಯರ ಪರಿಚಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

**ನೂತನ ಆಡಳಿತ ಮಂಡಲಿಯವರಿಂದ ಪ್ರಮಾಣ ವಚನ ಸ್ವೀಕಾರ :** ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿ ಸದಸ್ಯರಾಗಿ ಆಯ್ಕೆಯಾಗಿರುವ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸೇರಿದಂತೆ ಎಲ್ಲಾ 21 ನಿರ್ದೇಶಕರುಗಳು ತಮ್ಮ ಕರ್ತವ್ಯ ಹಾಗೂ ಜವಾಬ್ಧಾರಿಯನ್ನು ಉತ್ತಮವಾಗಿ ನಿರ್ವಹಿಸುವ ಬಗ್ಗೆ, ನಿಸ್ವಾರ್ಥದಿಂದ ಸೇವೆಯನ್ನು ನೀಡುವ ಬಗ್ಗೆ ಮತ್ತು ಆಡಳಿತದಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದಾಗಿ ದೇವರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದರು.



ಹಿರಿಯ ಸಹಕಾರಿಗಳಾದ ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ ಅವರಿಂದ ನೂತನ ಆಡಳಿತ ಮಂಡಲಿಯವರಿಗೆ ಪ್ರಮಾಣ ವಚನ ಬೋಧನೆ

ಪ್ರಮಾಣ ವಚನವನ್ನು ಹಿರಿಯ ಸಹಕಾರಿಗಳಾದ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಅರಿಹಂತ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವಾಸಾಹೇಬ ಅಣ್ಣಾಸಾಹೇಬ ಪಾಟೀಲರವರು ಭೋದಿಸಿದರು.

**ಮೌನಾಚರಣೆ :** ವರದಿ ಸಾಲಿನಲ್ಲಿ ಮರಣ ಹೊಂದಿದ ಗಣ್ಯರುಗಳಿಗೆ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್, ಮಾಜಿ ಸಹಕಾರ ಮಂತ್ರಿಗಳಾದ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಮಂಜುನಾಥ ಸಿದ್ಧಾಪುರ, ಯುವ ಸಹಕಾರಿ ಶ್ರೀ ಪುರುಷೋತ್ತಮ್ ಮತ್ತು ಕೆಲವು ಸೌಹಾರ್ದ ಸಹಕಾರಿಗಳ, ರೈತರ ಮತ್ತು ಯೋಧರ ಸ್ಮರಣಾರ್ಥ ಒಂದು ನಿಮಿಷ ಮೌನ ಆಚರಿಸಲಾಯಿತು.



**ಅಧ್ಯಕ್ಷರ ಭಾಷಣ :** ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸುದೀರ್ಘ ಭಾಷಣ ಮಾಡಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾಗುವ ಎಲ್ಲಾ ಕ್ರಮಗಳನ್ನು ವೇಗವಾಗಿ ಜರುಗಿಸಲು ಆಡಳಿತ ಮಂಡಲಿ ಬದ್ಧವಾಗಿದೆ. ಹಿಂದಿನ ಆಡಳಿತ ಮಂಡಲಿಯ ಅವಧಿಯಲ್ಲಿ ಹಿಂದಿನ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಇವರ ನೇತೃತ್ವದಲ್ಲಿ ಅನೇಕ ಉತ್ತಮ ಕೆಲಸಗಳನ್ನು ಜರುಗಿಸಲಾಗಿದೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ನಾನು ಹಾಗೂ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಮತ್ತು ಜಿಲ್ಲೆಗಳ ನಿರ್ದೇಶಕರು ಸೇರಿದಂತೆ ರಾಜ್ಯದಾದ್ಯಂತ ಪ್ರವಾಸ ಮಾಡಿ 2000ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳನ್ನು ಸಂಪರ್ಕ ಮಾಡಲಾಗಿದೆ. ಸೌಹಾರ್ದ ಸಹಕಾರಿಗಳ ಸಮಸ್ಯೆಗಳನ್ನು ಅಧ್ಯಯನ ಮಾಡಲಾಗಿದೆ.

ಸಮಸ್ಯೆಗಳ ಪರಿಹಾರೋಪಯವಾಗಿ ಈ ಸಭೆಗೆ ಕೇಂದ್ರ ಸಚಿವರಾದ ಶ್ರೀ ಅನಂತ ಕುಮಾರ್‌ರವರನ್ನು, ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ ಹೆಗಡೆಯವರನ್ನು ಹಾಗೂ ರಾಜ್ಯದ ನೂತನ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರನ್ನು ಆಮಂತ್ರಿಸಲಾಗಿತ್ತು. ಕಾರಣಾಂತರಗಳಿಂದ ಅವರುಗಳು ಸಭೆಗೆ ಬರಲಾಗಲಿಲ್ಲ. ಆದರೆ, ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ ಮತ್ತು ಶ್ರೀ ಅನಂತ ಕುಮಾರ್‌ರವರು ಒಂದು ಪತ್ರವನ್ನು ನೀಡಿದ್ದಾರೆ ಎಂದು ತಿಳಿಸಿದರು. ಈ ಕ್ಷೇತ್ರದ ಅಭಿವೃದ್ಧಿಗಾಗಿ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವೇಗವನ್ನು ಹೆಚ್ಚಿಸುವುದಕ್ಕಾಗಿ ಒಂದು ಕ್ರಿಯಾ ಯೋಜನೆಯನ್ನು ಹಾಗೂ ಉಪವಿಧಿಗಳ ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಅವುಗಳ ವಿವರವನ್ನು ಸಭೆಯ ಗಮನಕ್ಕೆ ಮಂಡಿಸಲಾಗಿದೆ ಎಂದು ತಿಳಿಸಿ ವಿವರಗಳನ್ನು ನೀಡಿದರು.

1. ಸಂಯುಕ್ತ ಸಹಕಾರಿಗೆ ಒಂದು ಸುಸಜ್ಜಿತವಾದ ಕಟ್ಟಡ ನಿರ್ಮಾಣ. ಅದರಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಆಡಳಿತ ಮಂಡಲಿಯ ಸಭಾಂಗಣ, ತರಬೇತಿ ಸಭಾಂಗಣ, ಗ್ರಂಥಾಲಯ, ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಬೆಂಗಳೂರಿಗೆ ಬಂದಾಗ ಉಳಿದುಕೊಳ್ಳುವ ಸಲುವಾಗಿ ಅತಿಥಿ ಗೃಹ ನಿರ್ಮಾಣ ವ್ಯವಸ್ಥೆ.
2. ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳನ್ನು ಹೆಚ್ಚು ಕ್ರಿಯಾಶೀಲರನ್ನಾಗಿ ಮಾಡುವುದು. ಸೌಹಾರ್ದ ಸಹಕಾರಿಗಳ ಎಲ್ಲಾ ಸಮಸ್ಯೆಗಳಿಗೆ ವಿಭಾಗೀಯ ಮಟ್ಟದಲ್ಲಿ ಪರಿಹಾರ ಒದಗಿಸಿಕೊಡುವುದು ಮತ್ತು ಸ್ವಂತ ನಿವೇಶನ ಹೊಂದುವುದು ಮತ್ತು ಕಟ್ಟಡ ನಿರ್ಮಾಣ ಮಾಡುವುದು.
3. ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಗಳಲ್ಲಿರುವ ತೊಡಕುಗಳ ನಿವಾರಣೆಗಾಗಿ 1997ರ ಮೂಲ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ, ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡಿಸುವ ಪ್ರಯತ್ನ.
4. ಕ್ರೆಡಿಟ್ ಸೌಹಾರ್ದ ಸಹಕಾರಿಗಳಿಗೆ ಬಾಧಿಸುತ್ತಿರುವ ಆದಾಯ ತೆರಿಗೆ ಪಾವತಿಗಾಗಿ ಆಗುತ್ತಿರುವ ತೊಂದರೆಯನ್ನು ಶಾಶ್ವತವಾಗಿ ಕೊನೆಗೊಳಿಸಲು ಪ್ರಯತ್ನಿಸುವುದು ಮತ್ತು ಹೈದರಾಬಾದ್‌ನ ಸಿಟಿಜನ್ ಸಹಕಾರ ಬ್ಯಾಂಕಿನ ವಿಷಯದಲ್ಲಿ ಸಹಕಾರಿ ಸಂಸ್ಥೆಗಳು ತೆರಿಗೆ ಪಾವತಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ಸೌಹಾರ್ದ ಸಹಕಾರಿಗಳ ಮುಂದಿರುವ ಕ್ರಮಗಳ ಬಗ್ಗೆ ಚರ್ಚಿಸಿ ನಿರ್ಣಯಿಸುವುದು.
5. ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಸಂಚಾರಿ ಪೀಠವನ್ನು ತುರ್ತಾಗಿ ಬೆಳಗಾವಿಯಲ್ಲಿ ಪ್ರಾರಂಭಿಸುವುದು, ನಂತರ ಕಲಬುರಗಿ ಹಾಗೂ ಮೈಸೂರು ವಿಭಾಗೀಯ ಸ್ಥಳಗಳಲ್ಲಿ ಪ್ರಾರಂಭಿಸುವುದು.
6. ಪ್ರತಿ ವಿಭಾಗಕ್ಕೆ ಒಂದು ಸೌಹಾರ್ದ ಸಹಕಾರಿ ನ್ಯಾಯಾಲಯದ ರಚನೆ.
7. ಪ್ರತಿ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಕಛೇರಿ ಪ್ರಾರಂಭಿಸುವುದು, ಅದಕ್ಕೆ ಸಂಬಂಧಿಸಿದಂತೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ನೇಮಕ.
8. ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯರ ಠೇವಣಿ ಖಾತರಿ ಯೋಜನೆಯನ್ನು ಜಾರಿಗೊಳಿಸುವುದು. (ಸದಸ್ಯರ ಡಿಪಾಸಿಟ್ ಇನ್ಶೂರೆನ್ಸ್ ಯೋಜನೆ)
9. ಸಹಕಾರಿಗಳಿಗಾಗಿ ಕಾಮನ್ ಸಾಫ್ಟ್‌ವೇರ್ ಸಿದ್ಧಪಡಿಸುವುದು.
10. ಕ್ರೆಡಿಟ್ ಸಹಕಾರಿ ಸಂಸ್ಥೆಗಳನ್ನು ಮಿನಿ ಬ್ಯಾಂಕಿನಂತೆ ಪರಿಗಣಿಸಲು ಪ್ರಯತ್ನಿಸಬೇಕು ಎಂಬುದಾಗಿ ಹಲವು ಸೌಹಾರ್ದ ಸಹಕಾರಿಗಳ ಚಿಂತನೆಯಾಗಿದೆ. ಈ ಬಗ್ಗೆ ರಿಸರ್ವ್ ಬ್ಯಾಂಕಿನೊಂದಿಗೆ ವ್ಯವಹರಿಸುವ ಮೊದಲಿಗೆ ಸಾಮಾನ್ಯ ಸಭೆಯ ಅಭಿಪ್ರಾಯ ಪಡೆದು ಮುಂದಿನ ಕ್ರಮವಿಡಲಾಗುವುದು.
11. ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ "ಸಿಬ್ಬಂದಿ ಸುರಕ್ಷಾ ಯೋಜನೆ" ಸಿದ್ಧಪಡಿಸಿ ಜಾರಿಗೊಳಿಸುವುದು.
12. ಸೌಹಾರ್ದ ಸಹಕಾರಿಗಳ ಗುಣಾತ್ಮಕ ಹಾಗೂ ತಾಂತ್ರಿಕ ಬೆಳವಣಿಗೆಗೆ ಯೋಜನೆ ರೂಪಿಸಿ ಕಾರ್ಯಗತಗೊಳಿಸುವುದು.
13. ಸದಸ್ಯ ಸಹಕಾರಿಗಳಿಗೆ ಆಕರ್ಷಕ ವ್ಯವಹಾರ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಸಿದ್ಧಪಡಿಸುವುದು.
14. **ಪತ್ತೇತರ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡುವುದು :** ಈ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಒಕ್ಕೂಟಗಳ ರಚನೆಗೆ ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಒಕ್ಕೂಟವನ್ನು ರಚಿಸಲು ಕ್ರಮವಿಡುವುದು, ಈ ಒಕ್ಕೂಟಗಳ ಮೂಲಕ ಹಲವಾರು ಪತ್ತೇತರ ಚಟುವಟಿಕೆಗಳನ್ನು ಸೌಹಾರ್ದ ಸಹಕಾರಿಗಳಿಗೆ ಒದಗಿಸುವ ಬಗ್ಗೆ ಕ್ರಮವಿಡುವುದಾಗಿದೆ.
15. ಡಿಜಿಟಲ್ ಸೌಹಾರ್ದ ಸಹಕಾರಿಯಾಗಿ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವಂತೆ ಪ್ರಯತ್ನಿಸುವುದು.

16. 6 ತಿಂಗಳ ಅವಧಿಯ ದೂರ ಶಿಕ್ಷಣ ತರಬೇತಿ. (Distance Courses)
17. ವಿಶ್ವವಿದ್ಯಾನಿಲಯಗಳಲ್ಲಿ ಸಹಕಾರ ವಿಷಯ ಪಠ್ಯವನ್ನು ಅಳವಡಿಸುವ ಕುರಿತು ಕ್ರಮವಿಡುವುದು.
18. **ಸುಸಜ್ಜಿತ ಉನ್ನತ ಮಟ್ಟದ ತರಬೇತಿ ಕೇಂದ್ರ ಹಾಗೂ ಅಂತರ ರಾಷ್ಟ್ರೀಯ ಸಹಕಾರ ಸಂಶೋಧನಾ ಕೇಂದ್ರ :** ಸಂಯುಕ್ತ ಸಹಕಾರಿಯ ವಿಸ್ತೃತ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಇದಕ್ಕಿಂತ ಕಡಿಮೆ ಮೊತ್ತದಲ್ಲಿ ಪುನಾ–ಬೆಂಗಳೂರು ಹೆದ್ದಾರಿಯಲ್ಲಿ ಬೆಂಗಳೂರಿಗೆ ಹತ್ತಿರದಲ್ಲಿ ನೆಲಮಂಗಲದ ಸುತ್ತಮುತ್ತ 5 ಎಕರೆ ಸೂಕ್ತ ಸ್ಥಳವನ್ನು ಖರೀದಿಸಿ ಸುಸಜ್ಜಿತ ಉನ್ನತ ಮಟ್ಟದ ತರಬೇತಿ ಕೇಂದ್ರ ಹಾಗೂ ಅಂತರ ರಾಷ್ಟ್ರೀಯ ಸಹಕಾರ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಬಹುದಾಗಿದೆ ಎಂಬುದು ಪ್ರಸಕ್ತ ಆಡಳಿತ ಮಂಡಲಿಯ ಚಿಂತನೆ. ಈ ಬಗ್ಗೆ ಸಾಮಾನ್ಯ ಸಭೆಯ ಅಭಿಪ್ರಾಯ ಹಾಗೂ ಅನುಮೋದನೆ ಪಡೆದು ಮುಂದಿನ ಕ್ರಮವಿಡಲಾಗುತ್ತದೆ.
19. ಸಂಯುಕ್ತ ಸಹಕಾರಿಯ ಕಛೇರಿಯ ಸಿಬ್ಬಂದಿಯವರು ಸಹಕಾರ ಇಲಾಖೆ, ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಜೊತೆಗೆ ಸಹಕಾರಿ ಗೆಳೆಯ, ತತ್ವಜ್ಞಾನಿ ಹಾಗೂ ಮಾರ್ಗದರ್ಶಿ (ಫ್ರೆಂಡ್, ಫಿಲಾಸಫರ್ ಹಾಗೂ ಗೈಡ್) ಯಾಗಿ ಕಾರ್ಯನಿರ್ವಹಿಸುವ ಹಾಗೇ ಹಾಗೂ ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಬಗ್ಗೆ ತತ್‌ಕ್ಷಣದಲ್ಲಿ ಸ್ಪಂದಿಸುವ ನಿಟ್ಟಿನಲ್ಲಿ ಕ್ರಮವಿಡುವ ಪ್ರಯತ್ನವನ್ನು ಮಾಡಲಾಗುವುದು.
20. ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ದಾವೆಗಳನ್ನು ಸಲ್ಲಿಸಲು ಸೌಹಾರ್ದ ಸಹಕಾರಿಗಳು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ವಿಭಾಗೀಯ ಮತ್ತು ಜಿಲ್ಲಾ ಮಟ್ಟದಲ್ಲಿಯೇ ದಾವಾ ಅರ್ಜಿಗಳನ್ನು ಭರ್ತಿ ಮಾಡಿ ದಾವೆ ಹಾಕುವ ಕ್ರಮವನ್ನು ಜಾರಿಗೆ ತರುವ ಬಗ್ಗೆ ಚಿಂತನೆ ನಡೆಸಿ ಸೂಕ್ತ ಹಾಗೂ ಶೀಘ್ರ ಕ್ರಮವಿಡಲಾಗುವುದು.
21. ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಕಾನೂನಾತ್ಮಕ, ಲೆಕ್ಕಪರಿಶೋಧನೆ ಹಾಗೂ ಇತರೆ ಸಮಸ್ಯೆಗಳ ನಿವಾರಣೆಗೆ ರಾಜ್ಯ ಮಟ್ಟದ ಹಾಗೂ ವಿಭಾಗ ಮಟ್ಟದ ಕಾನೂನು ಸಲಹಾ ಸಮಿತಿ ಹಾಗೂ ಲೆಕ್ಕಪರಿಶೋಧನಾ ಸಲಹಾ ಸಮಿತಿ ಮತ್ತು ಸೌಹಾರ್ದ ಸಹಕಾರಿ ಅಭಿವೃದ್ಧಿ ಸಮಿತಿಗಳನ್ನು ರಚಿಸಲು ಕ್ರಮವಿಡಲಾಗುವುದು. ಈ ಬಗ್ಗೆ ಸಾಮಾನ್ಯ ಸಭೆಯ ಅಭಿಪ್ರಾಯ ಹಾಗೂ ಅನುಮೋದನೆಯೂ ಅಗತ್ಯ.



ಸಾಮಾನ್ಯ ಸಭೆಯ ವಿಷಯ ಮಂಡನೆ

**ಸಭೆಯ ಕಾರ್ಯಕಲಾಪಗಳು :** ನಂತರದಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಾಮಾನ್ಯ ಸಭೆಗೆ ಗೈರು ಹಾಜರಾಗಲು ಅನುಮತಿ ಕೇಳಿರುವ ಸದಸ್ಯ ಸಹಕಾರಿಗಳ ಹೆಸರುಗಳನ್ನು ಓದಿದರು.

ನಂತರದಲ್ಲಿ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯ ನೋಟೀಸಿನ ಪ್ರಕಾರ ವಿಷಯಗಳ ಮಂಡನೆ ಮಾಡಿದರು. ಪ್ರತಿಯೊಂದು ವಿಷಯಗಳ ಮೇಲೆ ಸುದೀರ್ಘವಾದ ಚರ್ಚೆ ನಡೆದು ಎಲ್ಲಾ ವಿಷಯಗಳು ಸರ್ವಾನುಮತದಿಂದ ಅಂಗೀಕಾರವಾಗಿರುವುದು ಈ ಸಭೆಯ ವಿಶೇಷವಾಗಿತ್ತು.





ಸಾಮಾನ್ಯ ಸಭೆಯ ಕಾರ್ಯಕಲಾಪಗಳು







ಸಾಮಾನ್ಯ ಸಭೆಯ ವಿಷಯಗಳ ಚರ್ಚೆಯಲ್ಲಿ ಸದಸ್ಯ ಸಹಕಾರಿಗಳು

ಸಾಮಾನ್ಯ ಸಭೆಯ ಪ್ರತಿನಿಧಿಗಳಿಗೆ ಹಾಗೂ ಪ್ರೇಕ್ಷಕ ಸಹಕಾರಿಗಳಿಗಾಗಿ ಬೆಳಿಗ್ಗೆ ಉಪಹಾರ ಮತ್ತು ಮಧ್ಯಾಹ್ನ ಭೋಜನ ಹಾಗೂ ಸಾಯಂಕಾಲ ತಿಂಡಿ, ಟೀ ಕಾಫಿ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಕ್ಯಾಂಪ್ಕೋ, ಕೆ.ಎಂ.ಎಫ್. ಮತ್ತು ಕೆಲವು ಸೌಹಾರ್ದ ಸಹಕಾರಿಗಳು ತಮ್ಮ ಸ್ಟಾಲ್‌ಗಳನ್ನು ಹಾಕಿದ್ದರು. ಕೆಲವು ಕಂಪನಿಗಳಿಂದ ತಂತ್ರಜ್ಞಾನ ಮೇಳದ ವ್ಯವಸ್ಥೆ ಮಾಡಲಾಗಿತ್ತು. ಪ್ರಾರಂಭದಲ್ಲಿ ಸುಗಮ ಸಂಗೀತ ವ್ಯವಸ್ಥೆ ಮಾಡಲಾಗಿತ್ತು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳ 857 ಪ್ರತಿನಿಧಿಗಳು, 850 ಪ್ರೇಕ್ಷಕ ಸಹಕಾರಿಗಳು ಹಾಗೂ ಇತರೆ 400 ಜನರು ಭಾಗವಹಿಸಿದ್ದರು.


ಸುಗಮ ಸಂಗೀತ ಕಾರ್ಯಕ್ರಮ


ನೋಂದಣಿ


ತಾಂತ್ರಿಕ ಮೇಳ


ಊಟದ ವ್ಯವಸ್ಥೆ

**ಸಂವಾದ ಕಾರ್ಯಕ್ರಮ :** ಸಾಮಾನ್ಯ ಸಭೆಯ ನಂತರ ಜಿ.ಎಸ್.ಟಿ., ಆದಾಯ ತೆರಿಗೆ ವಿಷಯಗಳು ಹಾಗೂ ಹೈದರಾಬಾದ್‌ನ ಸಿಟಿಜನ್ ಸಹಕಾರ ಬ್ಯಾಂಕಿನ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು ವಿಷಯವಾಗಿ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ವಹಿಸಿದ್ದರು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು.





ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು

ಸಂಪನ್ಮೂಲ ವ್ಯಕ್ತಿಗಳಾಗಿ ವಕೀಲರಾದ ಶ್ರೀ ಮಲ್ಲಾರೆಡ್ಡಿಯವರು, ಚಾರ್ಟರ್ಡ್ ಅಕೌಂಟೆಂಟರುಗಳಾದ ಶ್ರೀ ಬಸಪ್ಪ ವೆಂಕಟಾಪುರ ಮತ್ತು ಶ್ರೀ ಬಿ.ವಿ.ರವೀಂದ್ರನಾಥರವರು, ಶ್ರೀ ಕೋರೆಯವರು ಉಪಸ್ಥಿತರಿದ್ದು, ವಿಷಯಗಳ ಬಗ್ಗೆ ಮಾಹಿತಿ ನೀಡಿದರು. ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳ ಪ್ರಶ್ನೆಗಳಿಗೆ ಸಮಂಜಸವಾಗಿ ಸಂಪನ್ಮೂಲ ವ್ಯಕ್ತಿಗಳು ಸ್ಪಂದಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಈ 3 ವಿಷಯಗಳ ಬಗ್ಗೆ ವಿವರಣೆ ನೀಡಿ ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ವಂದನೆ ಸಲ್ಲಿಸಿದರು.

## ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸಭೆ

ಸಾಮಾನ್ಯ ಸಭೆಯ ಹಾಗೂ ಸಂವಾದ ಕಾರ್ಯಕ್ರಮದ ಚಟುವಟಿಕೆಗಳು ಮುಕ್ತಾಯವಾದ ನಂತರ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು, ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವ್, ಶ್ರೀ ಎ.ಆರ್.ಪ್ರಸನ್ನಕುಮಾರ್ ಹಾಗೂ ಶ್ರೀ ಜಿ.ಶ್ರೀಧರ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಅನೇಕ ಅಧಿಕಾರಿಗಳು, ಸಿಬ್ಬಂದಿಯವರು ವಿಶೇಷವಾಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಈ ಸಲದ ಸಾಮಾನ್ಯ ಸಭೆಯ ವ್ಯವಸ್ಥೆ ಬಹಳ ಅಚ್ಚುಕಟ್ಟಾಗಿತ್ತು. ಸದಸ್ಯ ಪ್ರತಿನಿಧಿಗಳಿಂದ ಯಾವುದೇ ರೀತಿಯ ದೂರುಗಳಿರದ ರೀತಿಯಲ್ಲಿ ನೋಡಿಕೊಳ್ಳಲು ಸಾಧ್ಯವಾಗಿದೆ. ಪ್ರತಿನಿಧಿಗಳೂ ಸಹ ವ್ಯವಸ್ಥೆಗಳ ಕುರಿತು ತುಂಬಾ ಸಂತೋಷ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಮಾತನಾಡಿ ಸಂಯುಕ್ತ ಸಹಕಾರಿಯ ಸಿಬ್ಬಂದಿ ವರ್ಗದವರು ನಮ್ಮ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿದ್ದಾರೆ. ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಲು ಸಹಕರಿಸಿದ್ದಾರೆ. ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ಈ ಸಲದ ಸಾಮಾನ್ಯ ಸಭೆಯ ಯಶಸ್ಸಿಗೆ ಸಂಯುಕ್ತ ಸಹಕಾರಿಯ ಎಲ್ಲಾ ಸಿಬ್ಬಂದಿ ವರ್ಗದವರು ಅತ್ಯಂತ ಉತ್ಸಾಹದಿಂದ ಕಾರ್ಯನಿರ್ವಹಿಸಿರುವುದಕ್ಕೆ ಧನ್ಯವಾದಗಳನ್ನು ತಿಳಿಸಿ, ಇದೇ ರೀತಿ ಕೇಂದ್ರ ಕಛೇರಿ ಹಾಗೂ ವಿಭಾಗೀಯ ಕಛೇರಿಗೆ ಬರುವ ಸೌಹಾರ್ದ



ಸಹಕಾರಿಗಳ ಪ್ರತಿನಿಧಿಗಳಿಗೆ ಅವರ ಕೆಲಸ ಕಾರ್ಯಗಳನ್ನು ತ್ವರಿತಗತಿಯಲ್ಲಿ ಮಾಡಿಕೊಟ್ಟು ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಲು ತಿಳಿಸಿದರು. ಸಂಯುಕ್ತ ಸಹಕಾರಿಯ ಯಾವುದೇ ಸಿಬ್ಬಂದಿ ಅಥವಾ ಅಧಿಕಾರಿಗಳ ಬಗ್ಗೆ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ದೂರುವ ಹಾಗೇ ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿ ಒಂದು ತಂಡವಾಗಿ, ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎ.ಆರ್.ಪ್ರಸನ್ನಕುಮಾರ್, ಶ್ರೀ ಬಿ.ಎಸ್.ಗುಂಡೂರಾವ್, ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ ಎಲ್ಲಾ ಸಿಬ್ಬಂದಿಯವರಿಗೆ ಧನ್ಯವಾದ ಹೇಳಿದರು.

ಸಾಮಾನ್ಯ ಸಭೆಯ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಡೆಯಲು ಸಹಕರಿಸಿದ್ದಕ್ಕೆ ಕಿಂಗ್ಸ್ ಕೋರ್ಟ್‌ನ ವ್ಯವಸ್ಥಾಪಕರಾದ ಶ್ರೀ ಸಂಪತ್‌ರವರಿಗೆ ಸನ್ಮಾನಿಸಲಾಯಿತು. ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆಯವರು ವಂದನೆಗಳನ್ನು ಸಲ್ಲಿಸಿದರು.

## ದಿನಾಂಕ : 14-11-2017 ರಿಂದ 20-11-2017ರವರೆಗೆ 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ

### "ಸಹಕಾರಿ ಸಂಸ್ಥೆಗಳ ಡಿಜಿಟಲೀಕರಣದಿಂದ ಸಹಕಾರ ಕ್ಷೇತ್ರವನ್ನು ಬಲಪಡಿಸುವುದು"

ದೇಶದ ಸಹಕಾರ ಚಳುವಳಿಯ ಸಾಧನೆಗಳ ಬಗ್ಗೆ ಅವಲೋಕಿಸುವ, ಸವಾಲುಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ, ಮುಂಬರುವ ದಿನಗಳಲ್ಲಿ ಸಹಕಾರ ಚಳುವಳಿಯ ಮೂಲಕ ನಿರ್ವಹಿಸಬಹುದಾದ ಚಟುವಟಿಕೆಗಳ ಬಗ್ಗೆ ಮತ್ತು ಸಹಕಾರ ಕ್ಷೇತ್ರದ ಬಗ್ಗೆ ಸಾರ್ವಜನಿಕರ ಗಮನ ಸೆಳೆಯುವ ಸಾಧನೆಗಳನ್ನು ಪ್ರಚುರಪಡಿಸುವ ಹಾಗೂ ಸಹಕಾರಿಗಳಿಗೆ ಹುಮ್ಮಸ್ಸು ತುಂಬಿಸುವ, ಪ್ರೋತ್ಸಾಹಿಸುವ, ಸರಕಾರದ ಗಮನ ಸೆಳೆಯುವ ಉದ್ದೇಶದಿಂದ ಪ್ರತಿ ವರ್ಷ ಸಹಕಾರ ಸಪ್ತಾಹವನ್ನು ದೇಶದಾದ್ಯಂತ ಆಚರಿಸಲಾಗುತ್ತಿದೆ. ಇದರ ಆಚರಣೆಯ ಬಗ್ಗೆ ರಾಷ್ಟ್ರೀಯ ಸಹಕಾರ ಯೂನಿಯನ್‌ನವರು ಮಾರ್ಗದರ್ಶನ ನೀಡುತ್ತಾರೆ. ಅವರ ಮಾರ್ಗದರ್ಶನದಲ್ಲಿ ಸಹಕಾರ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಈ ಬಾರಿಯ ಸಪ್ತಾಹ 64ನೇ ಸಹಕಾರ ಸಪ್ತಾಹವಾಗಿದೆ. ಪ್ರಸ್ತುತ ಆಚರಿಸಲಾಗುತ್ತಿರುವ ಸಹಕಾರ ಸಪ್ತಾಹದ ಧ್ಯೇಯ "ಸಹಕಾರಿ ಸಂಸ್ಥೆಗಳ ಡಿಜಿಟಲೀಕರಣದಿಂದ ಸಹಕಾರ ಕ್ಷೇತ್ರವನ್ನು ಬಲಪಡಿಸುವುದು" ಆಗಿದೆ.

| ಸಪ್ತಾಹದ 7 ದಿನಗಳ ವಿವರಗಳು : | |
|---|---|
| 14-11-2017 | ಸಹಕಾರ ಕ್ಷೇತ್ರದ ಮೂಲಕ ಉತ್ತಮ ಆಡಳಿತ ನಿರ್ವಹಣೆ ಮತ್ತು ವೃತ್ತಿಪರತೆಯ ಅಭಿವೃದ್ಧಿ. |
| 15-11-2017 | ಉತ್ಪಾದಕರಿಂದ ಗ್ರಾಹಕರೆಡೆಗೆ ಸಹಕಾರ ಸಂಸ್ಥೆಗಳು. |
| 16-11-2017 | ಸಹಕಾರದ ಅಭಿವೃದ್ಧಿಗಾಗಿ ಕಾನೂನುಗಳ ರಚನೆ. |
| 17-11-2017 | ಖಾಸಗಿ ಹಾಗೂ ಸಾರ್ವಜನಿಕರ ಸಹಭಾಗಿತ್ವದಲ್ಲಿ ಸಹಕಾರ ಸಂಸ್ಥೆಗಳು. |
| 18-11-2017 | ಆರ್ಥಿಕ ಸೇರ್ಪಡೆ, ತಂತ್ರಜ್ಞಾನ, ನಗದು ರಹಿತ ವ್ಯವಹಾರಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ. |
| 19-11-2017 | ಆರ್ಥಿಕವಾಗಿ ಹಿಂದುಳಿದವರಿಗಾಗಿ ಮತ್ತು ಅವಕಾಶ ವಂಚಿತರಿಗಾಗಿ ಸಹಕಾರ ಸಂಸ್ಥೆಗಳು. |
| 20-11-2017 | ಕೌಶಲ್ಯ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಮಹತ್ವದ ಪಾತ್ರ. |

ಸಪ್ತಾಹದ 7 ದಿನಗಳ ಅವಧಿಯಲ್ಲಿ ಸಹಕಾರಿ ಸಂಸ್ಥೆಯ ಮೇಲೆ ಸಹಕಾರಿ ಬಾವುಟವನ್ನು ಹಾರಿಸುವುದು, ಸಭೆ ಸಮಾರಂಭಗಳನ್ನು ಏರ್ಪಡಿಸಿ ಹಿರಿಯ ಸದಸ್ಯರನ್ನು, ಸಹಕಾರಿ ವ್ಯಾಪ್ತಿಯಲ್ಲಿರುವ ವಿಶಿಷ್ಠ ಸಾಧಕರನ್ನು ಅಭಿನಂದಿಸುವ ಹಾಗೂ ಗೌರವಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು, ಶಾಲಾ ಕಾಲೇಜುಗಳಲ್ಲಿ ವಿಚಾರಗೋಷ್ಠಿ ಹಾಗೂ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ಯುವಕರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಳ್ಳುವುದು, ಸದಸ್ಯತ್ವ ಅಭಿಯಾನ, ಸಾಲಗಳ ವಿತರಣೆ, ಸಾಲ ವಸೂಲಾತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಹಾಗೂ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುವ ಮತ್ತು ಆಟಪಾಟಗಳ ಸ್ಪರ್ಧೆಗಳನ್ನು ಏರ್ಪಡಿಸಿ ಸಹಕಾರ ಕ್ಷೇತ್ರದ ಬಗ್ಗೆ ಸಾರ್ವಜನಿಕರ, ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದವರ, ಯುವಕರ ಹಾಗೂ ಮಹಿಳೆಯರ ಗಮನ ಸೆಳೆಯುವ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರ ಸಪ್ತಾಹವನ್ನು ಯಶಸ್ವಿಯಾಗಿ ಆಚರಿಸುವ ಮೂಲಕ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಪ್ರಯತ್ನದಲ್ಲಿ ಭಾಗಿಗಳಾಗಲು ಕೋರಿದೆ.

## ಮುಂಬರುವ ತರಬೇತಿ ಕಾರ್ಯಕ್ರಮಗಳು

- **ಸಂಪರ್ಕ ಸಭೆ :** ದಿನಾಂಕ 07 ಅಕ್ಟೋಬರ್ 2017 ರಂದು ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರು ತಿಳಿಸಿದ್ದಾರೆ.
- **ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನದ 18ನೇ ತಂಡದ ತರಬೇತಿ ಕಾರ್ಯಕ್ರಮ :** ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 18ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ದಿನಾಂಕ 07 ಡಿಸೆಂಬರ್ 2017 ರಿಂದ 16 ಡಿಸೆಂಬರ್ 2017ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದು, ತರಬೇತಿಗೆ ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸಿಬ್ಬಂದಿಯವರನ್ನು ಕಳುಹಿಸಿಕೊಡಲು ಕೋರಿದೆ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತಿನಿಧಿ ಶುಲ್ಕ ತಲಾ ರೂ.5,000/- (ವಸತಿ ಮತ್ತು ಊಟೋಪಚಾರ). ಅಧ್ಯಯನ ಪ್ರವಾಸ, ಅಧ್ಯಯನ ಸಾಹಿತ್ಯ ಹಾಗೂ ತರಬೇತಿ ಕಾರ್ಯಕ್ರಮದ ಖರ್ಚು-ವೆಚ್ಚಗಳನ್ನು ಸಂಯುಕ್ತ ಸಹಕಾರಿಯಿಂದ ಭರಿಸಲಾಗುವುದು. ಕಾರ್ಯಕ್ರಮಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚವನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ಭರಿಸಬೇಕು. ನೋಂದಣಿಯ ಕೊನೆಯ ದಿನಾಂಕ : 30.11.2017.

  **ಕಾರ್ಯಕ್ರಮದ ವಿವರ :** ತರಬೇತಿಯ ಅವಧಿಯಲ್ಲಿ ಸಹಕಾರ ಕ್ಷೇತ್ರ, ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು, ಕಛೇರಿ ಆಡಳಿತ ನಿರ್ವಹಣೆ, ಲೆಕ್ಕಪತ್ರಗಳ ನಿರ್ವಹಣೆ, ಹಣಕಾಸಿನ ನಿರ್ವಹಣೆ, ಸಾಲಪತ್ರಗಳ ನಿರ್ವಹಣೆ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಿಷಯಗಳು, ಆಂತರಿಕ ಸಂಬಂಧ ಹಾಗೂ ಗ್ರಾಹಕರ ಸೇವೆಗಳ ನಿರ್ವಹಣೆ, ಮಾನವೀಯ ಮೌಲ್ಯಗಳು ಮುಂತಾದ ವಿಷಯಗಳ ಬಗ್ಗೆ ತಿಳಿಸಿಕೊಡಲಾಗುವುದು. ಆರ್ಥಿಕ ತಃಖ್ತೆಗಳ ಸಿದ್ಧತೆ, ಸಭೆಯ ನೋಟೀಸ್, ಟಿಪ್ಪಣಿ ಹಾಗೂ ನಡವಳಿಗಳನ್ನು ಬರೆಯುವ ಬಗ್ಗೆ ಪ್ರಾಯೋಗಿಕ ನಡೆಸಿಕೊಡಲಾಗುತ್ತದೆ. ಅತ್ಯುತ್ತಮ ಸಹಕಾರ ಸಂಸ್ಥೆಗಳಿಗೆ ಅಧ್ಯಯನ ಪ್ರವಾಸ ಹಾಗೂ ಪ್ರೇಕ್ಷಣೀಯ ಸ್ಥಳಗಳ ಭೇಟಿಯನ್ನು ಆಯೋಜಿಸಲಾಗುತ್ತದೆ. ಬೆಳಿಗ್ಗೆ ಯೋಗಾಭ್ಯಾಸ, ಸಂಜೆ ಅನೌಪಚಾರಿಕ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತದೆ.

# ಸಂಯುಕ್ತ ಸಹಕಾರಿಯ ನಿರ್ದೇಶಕರ ವ್ಯಕ್ತಿ ಪರಿಚಯ ಭಾಗ – 3

## ಶ್ರೀ ಸಿದ್ರಾಮಪ್ಪ ಉಪ್ಪಿನ



ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ರೈತ ಕುಟುಂಬದಲ್ಲಿ ದಿನಾಂಕ 29-04-1940ರಲ್ಲಿ ಜನನ. ವಿಜಯಪುರದಲ್ಲಿ ಎಸ್.ಎಸ್.ಸಿ.ವರೆಗೆ ಶಿಕ್ಷಣ.

**ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರ :** ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರದ ಸೇವೆಯಲ್ಲಿಯೇ ಹೆಚ್ಚಿನ ಆಸಕ್ತಿ ಹೊಂದಿರುವ ಶ್ರೀಯುತರು ಆರ್.ಎಸ್.ಎಸ್‌ನೊಂದಿಗೆ ನಿಕಟ ಸಂಪರ್ಕ. ಜಿಲ್ಲಾ ಸಂಘ ಸಂಚಾಲಕರಾಗಿ ಸೇವೆ. ವೀರಶೈವ ಮಹಾ ಸಭಾದ ಜಿಲ್ಲಾಧ್ಯಕ್ಷರಾಗಿ ಬಿ.ಎಲ್.ಡಿ.ಇ. ಸಂಸ್ಥೆಯ ಹೈಸ್ಕೂಲ್ ವಿಭಾಗದ ಅಭಿವೃದ್ಧಿ ಸಮಿತಿಯಲ್ಲಿ 40 ವರ್ಷಗಳಿಂದ ಸೇವೆ ಮಾಡುತ್ತಿದ್ದಾರೆ. ಎ.ಪಿ.ಎಮ್.ಸಿ. ಕಾಟನ್ ಮರ್ಚೆಂಟ್ಸ್ ಅಸ್ಸೋಸಿಯೇಷನ್ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ ಹಾಗೂ ಅಧ್ಯಕ್ಷರಾಗಿ ಸಿದ್ದೇಶ್ವರ ದೇವಸ್ಥಾನ ಸಮಿತಿಯ ಸದಸ್ಯರಾಗಿ ಕಳೆದ 40 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಮಾಜಿ ಕೇಂದ್ರ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡಪಾಟೀಲ್ ಯತ್ನಾಳ್‌ರವರು ನಡೆಸುತ್ತಿರುವ ಸಂಗನಬಸವ ಇಂಟರ್ ನ್ಯಾಷನಲ್ ಎಜುಕೇಷನ್ ಇನ್‌ಸ್ಟಿಟ್ಯೂಟ್‌ನಲ್ಲಿ ಶ್ರೀಯುತರು ದಾನಿಗಳಾಗಿದ್ದರಿಂದ "ಎಸ್.ಸಿ. ಉಪ್ಪಿನ್ ಕಾಮರ್ಸ್ & ಸೈನ್ಸ್" ಎಂದು ಶ್ರೀಯುತರ ಹೆಸರಿಡಲಾಗಿದೆ. ಅದೇ ರೀತಿ ವೀರ ಶೈವ ಮಹಾಸಭಾದ ವಿಜಯಪುರದಲ್ಲಿ ಸ್ವಂತ ನಿವೇಶನದಲ್ಲಿ 10,000 ಚದರ ಅಡಿ ವಿಸ್ತೀರ್ಣದಲ್ಲಿ 3 1/2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಲಿಂಗಾಯತ ಭವನಕ್ಕೆ ಇವರು ದಾನಿಗಳಾಗಿದ್ದರಿಂದ "ಸಿದ್ರಾಮಪ್ಪ ಉಪ್ಪಿನ ಭವನ" ಎಂದು ಹೆಸರಿಡಲಾಗಿದೆ.

**ಸಹಕಾರ ಕ್ಷೇತ್ರ :** ಖಾದಿ ಗ್ರಾಮೋದ್ಯೋಗ ಸಹಕಾರ ಸಂಘದಲ್ಲಿ ಪದಾಧಿಕಾರಿ, ಎಣ್ಣೆ ಉತ್ಪಾದಕರ ಸಹಕಾರ ಸಂಘದಲ್ಲಿ ಪದಾಧಿಕಾರಿ, ಶ್ರೀ ಸಿದ್ದೇಶ್ವರ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು, ಈಗ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು. ಸಹಕಾರ ಭಾರತಿಯ ವಿಜಯಪುರ ಜಿಲ್ಲಾ ಪ್ರತಿನಿಧಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಸಹಕಾರಿ ತತ್ವಗಳನ್ನು ಅಧ್ಯಯನ ಮಾಡಿ ಕಾರ್ಯನಿರ್ವಹಿಸುವುದು ಅಗತ್ಯ. ಪ್ರಾಮಾಣಿಕ ಸೇವೆಯೇ ಯಶಸ್ಸಿನ ಮೆಟ್ಟಲು. ಆಚಾರ ವಿಚಾರಗಳು ಪರಿಶುದ್ಧವಾಗಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು. ಸಂಸ್ಥೆಯ ಧ್ಯೇಯ ಧೋರಣೆಗಳ ಅನುಷ್ಠಾನಕ್ಕಾಗಿ ಕಾರ್ಯನಿರ್ವಹಿಸುವ ಪ್ರವೃತ್ತಿ ಅಗತ್ಯ ಎಂದು ಶ್ರೀಯುತರು ಅಭಿಪ್ರಾಯಪಡುತ್ತಾರೆ.

## ಶ್ರೀ ಚಂದ್ರಕಾಂತ ಪಡಚಣ್ಣವರ

ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿಯ ಸದಸ್ಯರಾದ ಶ್ರೀ ಚಂದ್ರಕಾಂತ ಪಡಚಣ್ಣವರ ಇವರು ಮೂಲತಃ ಹುನ್ನಳ್ಳಿಯವರು. ಸುಸಂಸ್ಕೃತ ನೇಕಾರಿಕೆಯ ಕುಟುಂಬ. ತಂದೆ ಶ್ರೀ ಪರಂತಪ್ಪ ಗುರಮ್ಮ ಮುಂಬಯಿಯ ಮುರದಾಗ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ಇವರು 30-10-1950ರಲ್ಲಿ ಮುಂಬಯಿನಲ್ಲಿ ಜನಿಸಿದರು. ಇವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಅಲ್ಲಿಯೇ ಆಯಿತು. ನಂತರ ಹುಬ್ಬಳ್ಳಿಗೆ ಬಂದು ನೆಲೆಸಿದರು. ಕೊತ್ತಂಬರಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕಾಲೇಜು ಅಧ್ಯಯನ ಮಾಡಿ, ಬಿ.ಎಸ್‌ಸಿ. ಪದವಿ ಪಡೆದರು. ಆರ್.ಎಸ್.ಎಸ್.ನೊಂದಿಗೆ ನಿಕಟ ಸಂಪರ್ಕ. ನಿರಂತರ ಉಕ್ಕಿ ಹರಿಯುವ ದೇಶಾಭಿಮಾನ ಹಾಗೂ ರಾಷ್ಟ್ರೀಯತೆ ನೂರಾರು ಮಕ್ಕಳಿಗೆ ಈ ಬಗ್ಗೆ ವಿಷಯದ ಬಗ್ಗೆ ಕಲಿಸಿಕೊಟ್ಟಿದ್ದಾರೆ.



**ಶಿಕ್ಷಣ ಕ್ಷೇತ್ರ :** ನೇಕಾರಿಕೆ ಮನೆ ಉದ್ಯೋಗ. ಮನೆಯ ಉದ್ಯೋಗದೊಂದಿಗೆ ಸಮಾಜದ ಕೆಲಸವನ್ನು ಮಾಡುವ ಪ್ರವೃತ್ತಿ. ಶ್ರೀ ಬನಶಂಕರಿ ವಿದ್ಯಾವರ್ಧಕ ಸಂಘವನ್ನು ಹುಟ್ಟು ಹಾಕಿದರು. ಬುಕ್ ಬ್ಯಾಂಕ್ ಸ್ಥಾಪನೆ ಮಾಡಿದರು. ಉನ್ನತ ಶಿಕ್ಷಣಕ್ಕೆ ಬೇಕಾಗುವ ಎಲ್ಲಾ ಪುಸ್ತಕಗಳ ಸಂಗ್ರಹ, ಬೇಕಾದ ಪುಸ್ತಕಗಳನ್ನು ತೆಗೆದುಕೊಂಡು ಓದಿ ಮರಳಿಸುವ ವ್ಯವಸ್ಥೆ. ಈ ಸಂಘದ ಖಜಾಂಚಿಯಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

**ಸಹಕಾರ ಕ್ಷೇತ್ರ :** ಸಮಾಜದ ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರದಿಂದ ಸಹಾಯ ನೆರವು ಒದಗಿಸಲು ಸಾಧ್ಯ ಎಂಬುದನ್ನು ಅರಿತು ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎಂಬ ಸಹಕಾರಿ ತತ್ವದ ಅಡಿಯಲ್ಲಿ 2003ರಲ್ಲಿ ದಿ ಧಾರವಾಡ ಕ್ರೆಡಿಟ್ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸಿದರು. ಇದರ ಉಪಾಧ್ಯಕ್ಷರಾಗಿ ಸೇವೆ. ನಂತರ ಇದರ ಅಧ್ಯಕ್ಷರಾಗಿ ಸೇವೆ. ಶ್ರೀಯುತರು ನೇಕಾರರಿಗೆ ಅನುಕೂಲವಾಗುವ ಒಂದು ವಿನೂತನ ಯೋಜನೆಯನ್ನು ಪ್ರಾರಂಭಿಸಿದ್ದಾರೆ.

ನೇಕಾರರು ನೇಯ್ದ ಸೀರೆಗಳಿಗೆ ಗೈರ ಸೀಜನ್‌ನಲ್ಲಿ ಬೆಲೆ ಬಾರದೇ ನಷ್ಟವಾಗಬಾರದು ಮತ್ತು ನೇಕಾರರ ಕೆಲಸ ನಿರಂತರವಾಗಿ ನಡೆಯಬೇಕು, ಅವರಿಗೆ ಹಣಕಾಸಿನ ತೊಂದರೆಯಾಗಬಾರದು ಎಂಬ ಉದಾತ್ತ ಧ್ಯೇಯದಿಂದ ನೇಕಾರರು ಉತ್ಪಾದಿಸುವ ಸೀರೆಗಳನ್ನು ಅಡವು ಇಟ್ಟುಕೊಂಡು ಅದರ ಮೂಲ ಬೆಲೆಯ ಮೇಲೆ ಇಂತಿಷ್ಟು ಹಣವನ್ನು ನಿಗದಿ ಮಾಡಿ ಕೊಡುವುದು. ಬೆಲೆ ಬಂದಾಗ ಮತ್ತೆ ನೇಕಾರರು ಅವುಗಳನ್ನು ಮಾರಿ ಅಡವಿನ ಹಣವನ್ನು ಜಮಾ ಹಾಕಿಕೊಳ್ಳುವ ವ್ಯವಸ್ಥೆ. ಇದು ತುಂಬಾ ಪ್ರಸಿದ್ಧಿಯನ್ನು ಪಡೆದಿರುವ ಯೋಜನೆಯಾಗಿ ಹೊರಹೊಮ್ಮಿದೆ. ಇದರ ಜೊತೆಗೆ ವಿವಿಧ ರೀತಿಯ 22 ಸೌಲಭ್ಯಗಳನ್ನು ತನ್ನ ಸದಸ್ಯರಿಗೆ ನೀಡುತ್ತಿದೆ.

ತನ್ನದೇ ಆದ ಕಟ್ಟಡವನ್ನು ಹೊಂದಿದೆ. ಧಾರವಾಡದ ಮುಖ್ಯ ಕಛೇರಿಗೆ ಹಾಗೂ ನವನಗರ ಹಾಗೂ ಹುಬ್ಬಳ್ಳಿ ಶಾಖೆಗಳಿಗೆ ಸ್ವಂತ ಕಟ್ಟಡವಿದೆ. ಸ್ವಚ್ಛ ಮನಸ್ಸಿನ ಪ್ರಾಮಾಣಿಕ ಕಾರ್ಯನಿಷ್ಠರಾದ ಶ್ರೀ ಚಂದ್ರಕಾಂತರವರು ಸದ್ಯದಲ್ಲಿಯೇ ರಾಣೆಬೆನ್ನೂರು, ಹಾವೇರಿಗಳಲ್ಲಿ ಸಹಕಾರಿಯ ಶಾಖೆಗಳನ್ನು ತೆರೆಯುವ ಯೋಜನೆ ಹೊಂದಿದ್ದಾರೆ.

## ಶ್ರೀ ಆರ್.ತಿಮ್ಮಯ್ಯಶೆಟ್ಟಿ

ಕೃಷ್ಣೆ, ತುಂಗಭದ್ರೆಯರ ಮಧ್ಯದಲ್ಲಿ ರಾರಾಜಿಸುತ್ತಿರುಚ ಧೋ ಅಬ್ ಪ್ರದೇಶವೆಂದೇ ಹೆಸರುವಾಸಿಯಾಗಿರುವ, ದಾಸರು ಶರಣರು ನಡೆದಾಡಿದ ಈ ನೆಲ ಪುಣ್ಯಪಾವನ, ಅಂತಹ ನೆಲದ ರಾಯಚೂರು ಜಿಲ್ಲೆ ಮಾನ್ವಿ ನಗರದ ಶ್ರೀಮತಿ ಆರ್.ಸುಭದ್ರಮ್ಮ ಮತ್ತು ವಿಠೋಬಶೆಟ್ಟಿಯವರ ಉದರದಲ್ಲಿ ಪ್ರಥಮ ಸುಪುತ್ರರಾಗಿ ದಿನಾಂಕ 16–06–1949ರಂದು ಶ್ರೀ ಆರ್.ತಿಮ್ಮಯ್ಯಶೆಟ್ಟಿಯವರ ಜನನ. ಕೃಷಿ ಹಾಗೂ ವ್ಯಾಪಾರ ಇವರ ಕುಟುಂಬದ ವೃತ್ತಿ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮಾನ್ವಿ ನಗರದಲ್ಲಿಯೇ ಮುಗಿಸಿದರು. ನಂತರ ಪದವಿ ಶಿಕ್ಷಣದಲ್ಲಿ ಬಿ.ಕಾಂ. ಪದವಿ ಹಾಗೂ ಕಾನೂನು ಪದವಿ ಪಡೆದರು. ವ್ಯಾಪಾರ ಕ್ಷೇತ್ರವನ್ನು ಮುಂದುವರಿಸಿದರು.

**ಶಿಕ್ಷಣ ಕ್ಷೇತ್ರ :** ಸಮಾಜಕ್ಕೆ ಏನಾದರು ಕೊಡುಗೆ ನೀಡಬೇಕೆಂದು ಸಮಾಜದ ಸ್ನೇಹಿತರ ಜೊತೆಗೂಡಿ ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟು ಗಾಂಧೀ ಸ್ಮಾರಕ ಶಿಕ್ಷಣ ಸಂಸ್ಥೆಯನ್ನು ದಿನಾಂಕ 01–06–1977ರಂದು ಪ್ರಾರಂಭಿಸಿದರು. ಆ ಶಿಕ್ಷಣ ಸಂಸ್ಥೆಯು ದಿನಾಂಕ 01–04–1980 ರಿಂದ ಕರ್ನಾಟಕ ಸರಕಾರದಿಂದ ಅನುದಾನವನ್ನು ಪಡೆಯುವಂತಾಯಿತು. ಕೇವಲ 1 ರಿಂದ 4ನೇ ತರಗತಿಯವರೆಗೆ ನಡೆಯುತ್ತಿದ್ದ ಶಾಲೆಯನ್ನು ಮೇಲ್ದರ್ಜೆಗೇರಿಸಿ 7ನೇ ತರಗತಿವರೆಗೆ ಪ್ರಾರಂಭಿಸಲಾಯಿತು. ಉತ್ತಮ ಶಿಕ್ಷಣ ಸಂಸ್ಥೆಯನ್ನಾಗಿ ಬೆಳೆಸಿದರು.



ಪ್ರಾಥಮಿಕ ಶಿಕ್ಷಣ ನಂತರ ಪ್ರೌಢಶಾಲೆಯನ್ನು 1996ರಲ್ಲಿ ಸುಸಜ್ಜಿತವಾದ ಕಟ್ಟಡದೊಂದಿಗೆ ಬೋಧನೋಪಕರಣಗಳೊಂದಿಗೆ ಪ್ರಾರಂಭಿಸಿದರು. ಇಂದು ಆದರ್ಶ ವಿದ್ಯಾರ್ಥಿಗಳನ್ನು ತಯಾರು ಮಾಡುವ ಸಂಸ್ಥೆಯಾಗಿದೆ.

**ಸಾಮಾಜಿಕ ಕ್ಷೇತ್ರ :** ಸನ್ 1991ರಲ್ಲಿ ಸ್ನೇಹಿತರ ಬಳಗ ಇವರನ್ನು ಪುರಸಭಾ ಚುನಾವಣೆಗೆ ನಿಲ್ಲಿಸಿ, ಗೆಲ್ಲಿಸಿ ಮಾನವಿ ನಗರದ ಪ್ರಥಮ ಪ್ರಜೆಯಾಗಿ (ಪುರಸಭಾ ಅಧ್ಯಕ್ಷರು) ಅಧಿಕಾರ ಸೀಕರಿಸಿ, ನಗರದ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಿ, ಸರಕಾರದಿಂದ ಬರುವ ಯೋಜನೆಗಳನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ಮುಟ್ಟಿಸುವ ಕೆಲಸ ಮಾಡಿದರು.

**ಸಹಕಾರ ಕ್ಷೇತ್ರ :** ಸಣ್ಣಪುಟ್ಟ ವ್ಯಾಪಾರಸ್ಥರು, ಕಾರ್ಮಿಕರು, ಜನಸಾಮಾನ್ಯರಿಗೆ ಮಾನ್ವಿ ನಗರದ ರಾಷ್ಟ್ರೀಕೃತ ಬ್ಯಾಂಕುಗಳು ಸಕಾಲಕ್ಕೆ ಸಾಲ ಸೌಲಭ್ಯ ನೀಡದೇ ಇರುವುದನ್ನು ಗಮನಿಸಿ, ಸ್ನೇಹಿತರ ಮತ್ತು ನಾಗರೀಕರ ಜೊತೆಗೆ ಸಮರ್ಪಕವಾಗಿ ಆಲೋಚಿಸಿ, ನಗರದಲ್ಲಿ ಸಹಕಾರಿ ಬ್ಯಾಂಕನ್ನು ಏಕೆ ಪ್ರಾರಂಭಿಸಬಾರದೆಂದು ಉತ್ಸುಕತೆಯಿಂದ ಕೆಲವೇ ಜನರಿಂದ "ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್"ನ್ನು ಸ್ಥಾಪಿಸಿ, ಪೋಷಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಮಾನ್ವಿ ನಗರದ ಜನತೆಗೆ–ಮಾನ್ವಿ ನಾಗರೀಕರಿಂದಲೇ ಒಂದು ಪಟ್ಟಣ ಸಹಕಾರ ಬ್ಯಾಂಕನ್ನು ಸ್ಥಾಪಿಸುವ ಉದ್ದೇಶದಿಂದ ಕೇವಲ ರೂ.6.40 ಲಕ್ಷಗಳ ಶೇರು ಹಣದೊಂದಿಗೆ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕನ್ನು ದಿನಾಂಕ 31–07–1995ರಲ್ಲಿ ಸ್ಥಾಪಿಸಿದರು. ಕಳೆದ 2 ದಶಕಗಳಿಂದಲೂ ಸುಗಮವಾಗಿ ವರ್ಷದಿಂದ ವರ್ಷಕ್ಕೆ ಪ್ರಗತಿಯನ್ನು ಸಾಧಿಸುತ್ತಾ ಬಂದಿರುವ ಬ್ಯಾಂಕಿನ ಕಾರ್ಯಾಚರಣೆಯನ್ನು ಇತರ ಜಿಲ್ಲೆಗಳಿಗೂ ವಿಸ್ತರಣೆ ಮಾಡುವ ಯೋಜನೆ ಕೈಗೊಂಡು 2014–15ರಲ್ಲಿ 5 ಶಾಖೆಗಳನ್ನು, 2015–16ರಲ್ಲಿ 4 ಶಾಖೆಗಳನ್ನು ಪ್ರಾರಂಭಿಸುವುದರೊಂದಿಗೆ ಇಂದು 10 ಶಾಖೆಗಳು ಮತ್ತು 1 ಪ್ರಧಾನ ಕಛೇರಿ ನಿರ್ವಹಣೆ ಮಾಡುತ್ತಲಿದೆ. ಬ್ಯಾಂಕು ಪ್ರಾರಂಭದಿಂದಲೂ ಲಾಭ ಗಳಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿ ವರ್ಷ ಶೇ.20 ರಿಂದ 25ರಂತೆ ತನ್ನ ಸದಸ್ಯರಿಗೆ ಡಿವಿಡೆಂಡ್ ನೀಡುತ್ತಿರುವುದರಿಂದ 2 ದಶಕಗಳಲ್ಲಿ ಸದಸ್ಯರು ಶೇ.407ರಷ್ಟು ಡಿವಿಡೆಂಡ್ ಪಡೆದಿದ್ದಾರೆ. ಇಂದಿನ ಬ್ಯಾಂಕಿನ ಠೇವಣಿ ಪ್ರಮಾಣ ರೂ.200.00 ಕೋಟಿ, ನಿಧಿಗಳು ಹಾಗೂ ಶೇರು ರೂ.19.00 ಕೋಟಿ ಸೇರಿ ರೂ.226.00 ಕೋಟಿ ದುಡಿಯುವ ಬಂಡವಾಳ ಹೊಂದಿದೆ. ಈ ಬೆಳವಣಿಗೆಯನ್ನು ಗಮನಿಸಿದ ಸರ್ಕಾರ ಈ ಪಟ್ಟಣ ಸಹಕಾರಿ ಬ್ಯಾಂಕನ್ನು ಕಲಬುರಗಿ ವಿಭಾಗದ ಉತ್ತಮ ಕಾರ್ಯನಿರತ ಪಟ್ಟಣ ಸಹಕಾರ ಬ್ಯಾಂಕು ಎಂದು 3 ಬಾರಿ ಪುರಸ್ಕರಿಸಿದೆ. ಸಾಲ ವಸೂಲಿ ಪ್ರಮಾಣ ಶೇ.98 ಮತ್ತು ನಿವ್ವಳ ಅನುತ್ಪಾದನಾ ಸಾಲದ ಪ್ರಮಾಣ ಶೇ.0.98 ರಂತೆ ಕಾಪಾಡಿಕೊಂಡು ಬಂದಿದೆ.

ಈ ಬ್ಯಾಂಕಿನ ಪ್ರಾರಂಭದಲ್ಲಿದ್ದ 4 ಜನ ಸಿಬ್ಬಂದಿ ವೃಂದ ಬಲ ಇಂದು 127 ಜನ ಸಿಬ್ಬಂದಿ ವೃಂದ ಬಲ ಹೊಂದಿರುವುದರಿಂದ ನಿರುದ್ಯೋಗ ನಿವಾರಣೆಯಲ್ಲಿ ಅಲ್ಪ ಪಾತ್ರ ವಹಿಸಿದಂತಾಗಿದೆ.

ರಾಯಚೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ ಸುಮಾರು 15 ವರ್ಷಗಳ ಕಾಲ ಸೇವೆ ಪೂರೈಸಿದ್ದು, ಅವರ ಸಲಹೆ–ಸೂಚನೆಗಳು ಜಿಲ್ಲಾ ಸಹಕಾರಿ ಬ್ಯಾಂಕಿಗೂ ಲಭಿಸುವಂತಾಯಿತು. ಸಹಕಾರ ಭಾರತಿಯಲ್ಲಿ ಸಕ್ರಿಯ ಪಾತ್ರ ನಿರ್ವಹಿಸುತ್ತಾ ಬಂದಿರುವ ಇವರು ಸಹಕಾರಿ ಭಾರತಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಕಲಬುರಗಿ ಪ್ರಾಂತದ ಸಂಚಾಲಕ ಸದಸ್ಯರಾಗಿದ್ದಾರೆ. ಅಲ್ಲದೇ, ಕರ್ನಾಟಕ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾ ಮಂಡಳದ ಸಮಿತಿ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

## ಶ್ರೀ ಜಿ. ಶ್ರೀಧರ

ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗದ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಜಿ.ಶ್ರೀಧರರವರು ಎಂ.ಎಸ್‌ಸಿ, ಕೃಷಿ ಸ್ನಾತಕೋತ್ತರ ಪದವೀಧರರು. ಶ್ರೀಯುತರ ತಂದೆ ಮಾಜಿ ಶಾಸಕರಾದ ಶ್ರೀ ಜಿ.ವೀರಪ್ಪನವರು. ದಿನಾಂಕ 01–06–1972ರಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕೇಸರಗಟ್ಟಿ ಗ್ರಾಮದಲ್ಲಿ ಜನನ. ಕುಟುಂಬದ ವೃತ್ತಿ ಕೃಷಿ. ಇವರ ಆಯ್ಕೆ ಹೋಟೆಲ್ ಉದ್ಯಮ.



**ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರ :** ಶಿಕ್ಷಣ ಕ್ಷೇತ್ರಲ್ಲಿ ಒಂದು ವಿಶಿಷ್ಠ ಸಾಧನೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅತೀ ಕಡಿಮೆ ವೆಚ್ಚದಲ್ಲಿ ಗ್ರಾಮಮಟ್ಟದಲ್ಲಿ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಿರುವುದು ಅನೇಕ ಬಡವರಿಗೆ ಆಂಗ್ಲ ಭಾಷೆಯಲ್ಲಿ ಗ್ರಾಮಮಟ್ಟದಲ್ಲಿ ವಿದ್ಯಾಭ್ಯಾಸವನ್ನು ಮಾಡಲು ಅನುಕೂಲವಾಗಿದೆ.

"ತುಂಗಭದ್ರ ಉಳಿಸಿ" ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ತುಂಗಭದ್ರ "ಅಳಿಲು" ಪುಸ್ತಕದ ಪ್ರಾಯೋಜಕತ್ವ ನೀಡಿದ್ದಾರೆ. ಕೃಷಿ ವಿಜ್ಞಾನ ಕೇಂದ್ರ, ಗಂಗಾವತಿ ಇದರ ಸಲಹಾ ಸಮಿತಿ ಸದಸ್ಯರಾಗಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸರಕಾರದ ಕೃಷಿ ಇಲಾಖೆಯಿಂದ "ಕೃಷಿ ಪ್ರಶಸ್ತಿ" ದೊರಕಿದೆ.

ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿಯ ಸಂಸ್ಥಾಪಕ ನಿರ್ದೇಶಕರು. ಸಹಕಾರಿ ತತ್ವಗಳನ್ನು ಅಧ್ಯಯನ ಮಾಡಿ ಸಹಕಾರ ಕ್ಷೇತ್ರದ ಮೂಲಕ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯವೆಂದು ನಂಬಿದ ಯುವ ಸಹಕಾರಿಗೆ ಸಹಕಾರ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸೇವೆ ಮಾಡುವ ಅಭಿಲಾಷೆ ಇದೆ.

## ಎಲ್ಲರ ಒಳಗಿನ ಆನಂದ – ಓಶೋ



## ಜ್ಞಾನ ಜ್ಯೋತಿ

ಎಲ್ಲರೊಳಗೂ ಆನಂದದ ಸ್ರೋತ ಇದ್ದೇ ಇದೆ. ಧ್ಯಾನ ಮಾಡಿದಾಗ ಒಳಗಿನಾಳದ ಆನಂದ ಬೇಗನೆ ಪ್ರಕಟವಾಗುವುದು. ತಾಮಸಿಗೆ ಇದು ದೊರೆಯುವುದು ತಡ. ಒಂದು ಮಾತು ಖಚಿತ. ಭೇದವಿರುವುದು ಮಣ್ಣಿನ ಪದರಗಳಲ್ಲಿ. ಜಲ ಭೂಮಿಯೊಳಗೆ ಇದ್ದೇ ಇರುತ್ತದೆ. ಹಾಗೆಯೇ ಆನಂದದ ಬಿಂದಿಗೆಯಾಗಿರುವ ಆತ್ಮವೂ ಕೂಡ. ಭೇದವಿರುವುದು ಕರ್ಮದ ಪದರಗಳಲ್ಲಿ ಅಷ್ಟೇ. ಇದು ಹೇಗೆಂದರೆ ಅಂತರ್ಜಲ ಇದ್ದೇ ಇದೆ. ಆದರೆ ಎಲ್ಲ ಕಡೆಯೂ ಅದು ಲಭ್ಯವಾಗುವುದಿಲ್ಲ. ಮೊದಮೊದಲು ಮಣ್ಣು ತೋಡಿದಾಗ ಅದು ಕೈಗೆ ಹತ್ತುವುದಿಲ್ಲ. ಹಾಗೆಯೇ ಧ್ಯಾನಕ್ಕೆ ಕುಳಿತಾಗ ಕೈಗಂಟುವುದು ಕರ್ಮದ ಪದರಗಳು ಮಾತ್ರ. ಏಕೆಂದರೆ ಅವೇ ನಮ್ಮ ನಾಲ್ಕೂ ನಿಟ್ಟಿನಲ್ಲಿ ತುಂಬಿಕೊಂಡಿವೆ. ಅವುಗಳಿಂದ ಗಾಬರಿಯಾಗದೇ ಪ್ರಯತ್ನ ಮುಂದುವರೆಸಬೇಕು. ಹತಾಶೆಗೊಂಡು ಕೈಚೆಲ್ಲಿ ಕುಳಿತರೆ ನಷ್ಟ ನಮಗೇ. ಆನಂದವನ್ನು ಒಳಗೆ ತುಂಬಿಟ್ಟುಕೊಂಡು, ಅದರ ಮೇಲೆ ನೂರಾರು ಚಿಂತೆ, ಆಸೆ, ಆಮಿಷಗಳು, ಕ್ರೋಧಾದಿ ಭಾವಗಳ ಪದರ ಕಟ್ಟಿಕೊಂಡು ಕೂತಿರುವವರು ನಾವೇ. ಈ ಎಲ್ಲ ಪದರಗಳನ್ನು ಕಳಚುತ್ತಾ ಒಳಗಿನ ತಿಳಿಯನ್ನು ಕಂಡುಕೊಳ್ಳಬೇಕಿರುವುದೂ ನಾವೇ. ಮುಖ್ಯ ನಮ್ಮೊಳಗನ್ನು ಶೋಧಿಸುವುದನ್ನು ಬಿಡಬಾರದು.

ಕೆಲವರು ಧ್ಯಾನಾಭ್ಯಾಸದ ಹೊಸತರಲ್ಲಿ ರೋಷ, ಕ್ರೋಧಗಳನ್ನೇ ಹೊರ ಹಾಕುತ್ತಾರೆ. ಒಳ್ಳೆಯದೇ. ಅವುಗಳನ್ನು ಚೆಲ್ಲಿ ಮುನ್ನಡೆಯಬೇಕು. ಅವುಗಳನ್ನು ಚೆಲ್ಲಿದಾಗ ಕೆಳಗಿರುವ ಬೇರೆ ಬೇರೆ ಧಾರೆಗಳು ಸಿಗುವವು. ಕೋಪವನ್ನೆಲ್ಲ ಕಿತ್ತು ಹೊರ ದೂಡಿದಾಗ ಅದರ ಕೆಳ ಪದರದಲ್ಲಿಯೇ ಕರುಣಾರಸ ಸಿಗುವುದು. ಕರುಣೆಯೇ ಕ್ರೋಧದ ಮತ್ತೊಂದು ಪಾರ್ಶ್ವ. ಒಳಗಿನ ಹಿಂಸಾಭಾವವನ್ನು ಪೂರ್ತಿಯಾಗಿ ಮೊಗೆದು ಹೊರಚೆಲ್ಲಿದಾಗ ಅದರ ಕೆಳಗೇ ಅಹಿಂಸಾ ಭಾವವು ಆವಿರ್ಭವಿಸುವುದು. ಮೊದಲು ಒಳಗಿನ ನಕಾರಾತ್ಮಕ ಭಾವಗಳನ್ನು ಹೊರದೂಡಬೇಕು. ನಮ್ಮೊಳಗೆ ಹುದುಗಿರುವ ರೋಗಾಣುಗಳನ್ನು ಹೊರತಳ್ಳಬೇಕು. ರೇಚನವಾದೊಡನೆ ಆರೋಗ್ಯ ತಾನೇ ಆವಿರ್ಭವಿಸುವುದು. ರೋಗಾಣುಗಳನ್ನು ಹೊರ ಚೆಲ್ಲಿದರೆ ಸ್ವಾಸ್ಥ್ಯವೆಂಬ ಶುದ್ಧ ಜಲ ಹೊರ ಹೊಮ್ಮುವುದು. ಶಂಕರ, ಬುದ್ಧ, ಮಹಾವೀರ ಇವರಲ್ಲಿ ಎಷ್ಟು ಪವಿತ್ರವಾದ ತಿಳಿಜಲವಿತ್ತೋ ಅಷ್ಟೇ ಪವಿತ್ರವಾದ ಶುದ್ಧ ನೀರು ನಿಮ್ಮೊಳಗೂ ಇರುವುದು. ಆದರೆ ಅದನ್ನು ಅರಿಯುವ ಪ್ರಯತ್ನ ಮಾಡಬೇಕಷ್ಟೆ. 'ಸ್ವ'ಭಾವದಿಂದ ನೀನೂ ಹಾಗೆಯೇ ಇರುವೆ. 'ಸ್ವ'ಭಾವದಲ್ಲಿ ಎಳ್ಳು ಕಾಳಿನಷ್ಟೂ ವ್ಯತ್ಯಾಸವಿರುವುದಿಲ್ಲ.

ಏನೂ ವ್ಯತ್ಯಾಸವಿಲ್ಲದಿರುವಿಕೆಯೇ 'ಸ್ವ'ಭಾವದ ಅರ್ಥ. ಅದನ್ನು ಸೇರಲು, ಮುಟ್ಟಲು ತುಂಬ ಅಗೆಯಬೇಕು, ತೋಡಬೇಕು. ಎಷ್ಟು ಬೇಗ ಈ ಪ್ರಕ್ರಿಯೆ ಆರಂಭಿಸುವೆಯೋ ಅಷ್ಟು ಶ್ರೇಯಸ್ಕರ. ಆದರೆ ಒಂದು ಎಚ್ಚರವಿರಲಿ! ಹೊರಗೆ ಚೆಲ್ಲಿದುದನ್ನು ಪುನಃ ಅದಕ್ಕೆ ತುಂಬುವ ದಡ್ಡತನ ಮಾಡದಿರಿ. ಧ್ಯಾನಕ್ಕೆ ಕುಳಿತಾಗ ಎಷ್ಟು ಕೊಳಕನ್ನು ಹೊರಗೆ ಚೆಲ್ಲುವೆವೋ ಅದು ಬೇರೆ ಸಮಯದಲ್ಲಿ ಮರಳಿ ಗುಂಡಿಗೆ ತುಂಬದಂತೆ ಎಚ್ಚರದಿಂದಿರಬೇಕು. ಇಲ್ಲವಾದಲ್ಲಿ ಜೀವಮಾನ ಪೂರ್ತಿ ಅಗೆದು ಮುಚ್ಚುವ ಮೂರ್ಖತನದ ಕೆಲಸ ಮಾಡುತ್ತಲೇ ಇರಬೇಕಾದೀತು. ಇದ-ರಿಂದ ದಕ್ಕುವುದೇನೂ ಇಲ್ಲ. ವೃಥಾ ಶ್ರಮ ಮತ್ತು ಸಮಯ ನಷ್ಟ. ಎಲ್ಲಕ್ಕಿಂತ ಮುಖ್ಯ, ಒಳಗನ್ನು ಅರಿಯಬೇಕೆಂದರೆ ಒಳಗಣ್ಣು ತೆರೆಯಬೇಕು. ಇಲ್ಲವಾದರೆ ನಾವು ಎಷ್ಟು ತೆ-ಾಡಿದರೂ ಅಷ್ಟೇ... ಎಷ್ಟು ಧ್ಯಾನ ಮಾಡಿದರೂ ಅಷ್ಟೇ. ದಿನವಿಡೀ ಧ್ಯಾನ ಮಾಡಿ, ನಿಮ್ಮನ್ನು ನೀವು ನೋಡಿಕೊಳ್ಳಲು ಸಾಧ್ಯವಾಗದೆ ಹೋದರೆ ಪ್ರಯೋಜನವಿಲ್ಲ. ಹೊರಗಣ್ಣನ್ನು ಮುಚ್ಚಿ, ಒಳಗಣ್ಣನ್ನು ತೆರೆದಿಡಿ. ನಿಮ್ಮೊಳಗಿನ ಆಳದಲ್ಲಿರುವ ಆನಂದ ನಿಮಗೆ ಗೋಚರಿಸುವುದು.

## ಇ-ಸ್ಟ್ಯಾಂಪಿಂಗ್ ಕಮೀಷನ್ ಹೆಚ್ಚಿಸಲು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಮನವಿ

**ಬೆಂಗಳೂರು** : ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯರವರು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಅಧಿಕಾರಿಗಳೊಂದಿಗೆ ದಿನಾಂಕ 26.09.2017ರಂದು ಚರ್ಚಿಸಿ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಸೌಹಾರ್ದ ಸಹಕಾರಿಗಳಿಗೆ ನೀಡುತ್ತಿರುವ ಕಮೀಷನ್ ಮೊತ್ತವನ್ನು ಹೆಚ್ಚಿಸಲು ಮನವಿ ಮಾಡಿದರು.

ಜೊತೆಗೆ ಸೌಹಾರ್ದ ಸಹಕಾರಿಗಳು ಜಿ.ಎಸ್.ಟಿ. ವಸೂಲಿ ಮಾಡುವುದೋ ಅಥವಾ ಮಾಡದೇ ಇರುವುದೋ ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು ಮತ್ತು ಸೌಹಾರ್ದ ಸಹಕಾರಿಗಳು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದಲ್ಲಿ ತಮ್ಮ ಖಾತೆಯಲ್ಲಿ ಲಭ್ಯವಿರುವ ನಿಗದಿತ ಮೊತ್ತದಲ್ಲಿಯೇ ವ್ಯವಹಾರ ನಿರ್ವಹಿಸಲು ಸಾಧ್ಯವಾಗುವಂತೆ ತಂತ್ರಾಂಶವನ್ನು ಅಳವಡಿಸಲು ಹಾಗೂ ಐಡಿ ಗಳ ನಿರ್ವಹಣೆಯಲ್ಲಿ ನಿಧಾನವಾಗುತ್ತಿರುವುದರಿಂದ ಆಗುತ್ತಿರುವ ತೊಂದರೆಗಳನ್ನು ತಿಳಿಸಿ, ಇವುಗಳ ನಿವಾರಣೆಗೆ ಕ್ರಮವಿಡಬೇಕೆಂದು ಕೋರಿದರು.



ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರೊಂದಿಗೆ ನಡೆಸಿದ ಮಾತುಕತೆ ಫಲಪ್ರದವಾಗಿದ್ದು, ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ, ಮುಂದಿನ ದಿನಗಳಲ್ಲಿ ತೊಂದರೆಗಳ ನಿವಾರಣೆ ಸಾಧ್ಯ ಎಂದು ತಿಳಿಸಿದರು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಸುಮಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ನಾಗತಿಬಸಾಪುರ, ಹೂವಿನಹಡಗಲಿ



ಶ್ರೀಮತಿ ಕೆ.ಸುಮ
ಅಧ್ಯಕ್ಷರು



ಶ್ರೀ ಕೆ. ಉಮೇಶ್
ಉಪಾಧ್ಯಕ್ಷರು

### ವಿಕಾಸಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ



ಶ್ರೀ ಮಲ್ಲಿಕಾರ್ಜುನ ನರೇಗಲ್
ಅಧ್ಯಕ್ಷರು



ಶ್ರೀಮತಿ ಅನ್ನಪೂರ್ಣ ಬನಿಗೋಳ
ಉಪಾಧ್ಯಕ್ಷರು

### ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾದಾಮಿ



ಶ್ರೀ ಎಸ್.ಎಸ್.ಮಿಟ್ಟಲಕೋಡ
ಅಧ್ಯಕ್ಷರು



ಶ್ರೀ ಎಸ್.ಎನ್.ಚಿಕ್ಕರಡ್ಡಿ
ಉಪಾಧ್ಯಕ್ಷರು

## ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷರಾಗಿ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಕೆ. ಸತೀಶ ಮತ್ತು ಆಡಳಿತ ಮಂಡಳಿಯ ನಿರ್ದೇಶಕರುಗಳಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ ಹಾಗೂ ಶ್ರೀ ಜಿ.ಎನ್.ಪಾಟೀಲರವರು ಆಯ್ಕೆ



ಶ್ರೀ ಗುರುನಾಥ ಜ್ಯಾಂತಿಕರ
ಅಧ್ಯಕ್ಷರು

ರಾಜ್ಯದಲ್ಲಿ ಸಹಕಾರ ಕ್ಷೇತ್ರದ ಪ್ರಚಾರಕ್ಕಾಗಿಯೇ ಪ್ರಾರಂಭಿಸಿರುವ ಈ ಸುದ್ದಿ ಮಾಧ್ಯಮದ ಪ್ರಥಮ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 29.08.2017 ನಡೆದು 21 ಜನ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ದಿನಾಂಕ : 08.09.2017ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ಉಪಾಧ್ಯಕ್ಷರಾಗಿ ಶ್ರೀ ಕೆ.ಸತೀಶ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



ಶ್ರೀ ಕೆ.ಸತೀಶ
ಉಪಾಧ್ಯಕ್ಷರು

### ಆಡಳಿತ ಮಂಡಳಿಯ ನಿರ್ದೇಶಕರು



ಶ್ರೀ ಎಸ್.ಆರ್. ಸತೀಶ್ಚಂದ್ರ
ಮಾನ್ಯ ನಿರ್ದೇಶಕರು



ಶ್ರೀ ಅಜಯಕುಮಾರ ಸರ್‌ನಾಯಕ
ಮಾನ್ಯ ನಿರ್ದೇಶಕರು



ಶ್ರೀ ಚೊಕ್ಕ ಬಸವನಗೌಡ್ರು
ಮಾನ್ಯ ನಿರ್ದೇಶಕರು



ಶ್ರೀ ಅಣ್ಣಾ ಸಾಹೇಬ ಶಂಕರ ಜೊಲ್ಲೆ
ಮಾನ್ಯ ನಿರ್ದೇಶಕರು



ಶ್ರೀ ಶಿವಕುಮಾರಗೌಡ ಪಾಟೀಲ
ಮಾನ್ಯ ನಿರ್ದೇಶಕರು



ಡಾ. ಎಂ.ಎನ್. ರಾಜೇಂದ್ರ ಕುಮಾರ್
ಮಾನ್ಯ ನಿರ್ದೇಶಕರು



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಮಾನ್ಯ ನಿರ್ದೇಶಕರು



ಶ್ರೀ ಬಿ.ಎಸ್. ಪರಮಶಿವಯ್ಯ
ಮಾನ್ಯ ನಿರ್ದೇಶಕರು



ಶ್ರೀ ಹೆಚ್.ವಿ. ರಾಜೀವ್
ಮಾನ್ಯ ನಿರ್ದೇಶಕರು



ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ
ಮಾನ್ಯ ನಿರ್ದೇಶಕರು



ಶ್ರೀ ಗುರನಗೌಡ ಪಾಟೀಲ
ಮಾನ್ಯ ನಿರ್ದೇಶಕರು



ಶ್ರೀಮತಿ ಮಂಜುಳ ಪಾಟೀಲ
ಮಾನ್ಯ ನಿರ್ದೇಶಕರು



ಶ್ರೀ ಸಿ.ಎ. ಉಮೇಶ್ ಶೆಟ್ಟಿ
ಮಾನ್ಯ ನಿರ್ದೇಶಕರು



ಶ್ರೀ ಜಗದೀಶಪ್ಪ ಬಣಕಾರ
ಮಾನ್ಯ ನಿರ್ದೇಶಕರು



ಶ್ರೀ ವೈ.ಎನ್. ಶಂಕರೇಗೌಡ
ಮಾನ್ಯ ನಿರ್ದೇಶಕರು



ಶ್ರೀ ಶಿವಾನಂದ ಮಂಠಾಳಕರ್
ಮಾನ್ಯ ನಿರ್ದೇಶಕರು



ಶ್ರೀ ಸಿದ್ರಾಮಪ್ಪ ಪಾಟೀಲ
ಮಾನ್ಯ ನಿರ್ದೇಶಕರು



ಶ್ರೀ ಸಿ. ಎಸ್. ವೀರೇಶ್
ಮಾನ್ಯ ವೃತ್ತಿಪರ ನಿರ್ದೇಶಕರು

ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ
ಮಾನ್ಯ ನಿರ್ದೇಶಕರು



ಶ್ರೀ ಶರಣಗೌಡ ಜಿ. ಪಾಟೀಲ
ಮಾನ್ಯ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು

ಈ ಸುದ್ದಿ ಮಾಧ್ಯಮ ಮಹಾಮಂಡಳದ ಸ್ಥಾಪನೆಗಾಗಿ ರಾಜ್ಯದ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲರವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರ ಸಹಕಾರದೊಂದಿಗೆ ಕಳೆದ 2–3 ವರ್ಷಗಳಿಂದ ನಡೆದ ಸತತ ಪ್ರಯತ್ನದ ಫಲವಾಗಿ ಈ ಸಹಕಾರ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ.

# ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಪ್ರಥಮ ವಾರ್ಷಿಕ ಮಹಾಸಭೆ



ದಿನಾಂಕ : 23–09–2017ರಂದು ಈ ಸಂಸ್ಥೆಯ ಪ್ರಥಮ ವಾರ್ಷಿಕ ಮಹಾಸಭೆ ಸಹಕಾರ ಮಹಾಮಂಡಳದ ಸಭಾಂಗಣದಲ್ಲಿ ನಡೆದು ಅತೀ ಶೀಘ್ರವಾಗಿ ಈ ಸಂಸ್ಥೆಯ ನೇತೃತ್ವದಲ್ಲಿ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ತನ್ನದೇ ಆದ ಟಿ.ವಿ. ಚಾನೆಲ್ ಪ್ರಾರಂಭಿಸಲಿದೆ. ಅದಕ್ಕೆ ಪ್ರಾರಂಭದಲ್ಲಿ ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳು ಶೇರು ಖರೀದಿಸಿ ಪ್ರೋತ್ಸಾಹಿಸಲು ಕೋರಿದೆ.

ಪ್ರಾರಂಭದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಸತೀಶರವರು ಸ್ವಾಗತ ಮಾಡಿದರು. ಶ್ರೀ ಶರಣಗೌಡ ಜಿ. ಪಾಟೀಲರವರು ಮಹಾಸಭೆಯ ಕಾರ್ಯಕಲಾಪಗಳನ್ನು ವಿಷಯ ಪಟ್ಟಿ ಪ್ರಕಾರ ನಡೆಸಲು ಸಭೆಯ ಅನುಮತಿ ಕೋರಿ ಅದರಂತೆ ಸಭೆಯನ್ನು ನಡೆಸಲಾಯಿತು. ನಂತರ ಸಭೆಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಮಾತನಾಡಿ ಈ ಸಂಸ್ಥೆಯನ್ನು ಹುಟ್ಟುಹಾಕಲು ಮಾಜಿ ಸಹಕಾರ ಸಚಿವರು ಬಹಳ ಶ್ರಮವಹಿಸಿದ್ದಾರೆ. ಅವರ ಈ ಮಹತ್ವಾಕಾಂಕ್ಷೆ ಈಡೇರುವಂತಾಗಬೇಕು. ಕನಸಿನ ಈ ಚಾನೆಲ್ 24*7 ಆಗಿ ಕಾರ್ಯ ನಿರ್ವಹಿಸಲಿದೆ. ಸಹಕಾರ ಕ್ಷೇತ್ರದ ಸಮಗ್ರ ಮಾಹಿತಿ ನೀಡುವ ಚಾನೆಲ್ ಆಗಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲಿದೆ.

ಸಹಕಾರ ಕ್ಷೇತ್ರದ 100 ವರ್ಷದ ಸಾಧನೆಗಳನ್ನು ಈ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿದ ಸಹಕಾರಿಗಳ, ಕಾರ್ಯಕರ್ತರುಗಳ, ಅಧಿಕಾರಿಗಳ ಒಟ್ಟಾರೆ ಸಹಕಾರ ಕ್ಷೇತ್ರದ ವಿರಾಟ ಸ್ವರೂಪವನ್ನು ಬಿತ್ತರಿಸುವ ಚಾನೆಲ್ ಆಗಿ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಉತ್ತಮ ಭಾವನೆಯನ್ನು ಬಿಂಬಿಸುವ ಕಾರ್ಯ ಮಾಡಲಿದೆ ಎಂದು ತಿಳಿಸಿದರು.

ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು. ವೃತ್ತಿಪರ ನಿರ್ದೇಶಕರಾದ ಶ್ರೀ ಸಿ.ಎಸ್.ವೀರೇಶರವರು ವಂದನಾರ್ಪಣೆ ಸಲ್ಲಿಸಿದರು.

**ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಶೇರು ಖರೀದಿಸಲು ಸಹಕಾರಿ ಸಂಸ್ಥೆಗಳಲ್ಲಿ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಾಧ್ಯಕ್ಷರಾದ ಶ್ರೀ ಕೆ.ಸತೀಶರವರ ಮನವಿ**

ದೇಶದ ಸಹಕಾರ ಕ್ಷೇತ್ರದಲ್ಲಿ ವಿನೂತನ ಸಹಕಾರಿ ಸಂಸ್ಥೆಯಾಗಿರುವ ಈ ಸಂಸ್ಥೆಯ ಮೂಲಕ ಸಹಕಾರ ಕ್ಷೇತ್ರದ ಸುದ್ದಿಗಳನ್ನು ಬಿತ್ತರಿಸುವ ದೃಶ್ಯ ಮಾಧ್ಯಮವಾದ ಬಸವೇಶ್ವರ ಸಹಕಾರ ಟಿ.ವಿ. ಚಾನೆಲ್ ಅನ್ನು ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳ ನೆರವಿನಿಂದ ಸದ್ಯದಲ್ಲಿಯೇ ಪ್ರಾರಂಭವಾಗಲಿದೆ. ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳು ಈ ಸಂಸ್ಥೆಯ ಶೇರು ಖರೀದಿಸಿ ಈ ಪ್ರಯತ್ನಕ್ಕೆ ಸಹಕಾರ ನೀಡಲು ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಾಧ್ಯಕ್ಷರಾದ ಶ್ರೀ ಕೆ.ಸತೀಶರವರು ಮನವಿ ಮಾಡಿದ್ದಾರೆ.

### ಆದಾಯ ತೆರಿಗೆ ಪ್ರಧಾನ ಮುಖ್ಯ ಆಯುಕ್ತರು, ಗೋವಾ ಮತ್ತು ಕರ್ನಾಟಕ ಇವರ ಭೇಟಿ

## ಸಹಕಾರಿ ಸಂಸ್ಥೆಗಳು ಕಾಳಧನಿಕರ ಆಶ್ರಯ ತಾಣವಾಗಬಾರದು – ಶ್ರೀ ರಜನೀಶ

ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ದಿನಾಂಕ 25.09.2017ರಂದು ಬೆಂಗಳೂರಿನ ಆದಾಯ ತೆರಿಗೆ ಇಲಾಖೆಯ ಗೋವಾ ಮತ್ತು ಕರ್ನಾಟಕ ವಿಭಾಗದ (ಆದಾಯ ತೆರಿಗೆ ಪ್ರಧಾನ ಮುಖ್ಯ ಆಯುಕ್ತರು) ಇವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ನೋಟೀಸುಗಳು ಬರುತ್ತಿರುವುದರಿಂದ ಸೌಹಾರ್ದ ಸಹಕಾರಿಗಳಿಗೆ ತೊಂದರೆ ಆಗುತ್ತಿರುವುದರ ಕುರಿತು ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನ ಮುಖ್ಯ ಆಯುಕ್ತರಾದ ಶ್ರೀ ರಜನೀಶರವರು, ಸಹಕಾರ ಸಂಸ್ಥೆಗಳಲ್ಲಿ ಸದಸ್ಯೇತರರ ಜೊತೆಗೆ ವ್ಯವಹಾರ ಮಾಡಿದಾಗ ತೆರಿಗೆ ಪಾವತಿಸುವುದು ಅವಶ್ಯಕ. ಅಂತಹವುಗಳನ್ನು ಪತ್ತೆ ಹಚ್ಚಲು ನಾವು ನೋಟೀಸು ಕೊಡುವುದು ಅನಿವಾರ್ಯ. ಸದಸ್ಯರೊಡನೆ



ವ್ಯವಹಾರ ಮಾಡುವ ಸಹಕಾರಿ ಸಂಸ್ಥೆಗಳು ತೆರಿಗೆ ಪಾವತಿಯಿಂದ ವಿನಾಯಿತಿ ಪಡೆಯುತ್ತಾರೆ. ಸದಸ್ಯರೇತರರೊಂದಿಗೆ ವ್ಯವಹಾರ ಮಾಡಿ ತೆರಿಗೆ ಪಾವತಿಸದಿದ್ದರೆ ಆದಾಯ ತೆರಿಗೆ ಕ್ರಮ ಅಗತ್ಯವಾಗುತ್ತದೆ, ಅನಗತ್ಯ ತೊಂದರೆಯಾಗದಿರುವಂತೆ ಕ್ರಮವಿಡಲಾಗುವುದು ಎಂದು ತಿಳಿಸಿದರು.

## ಸಂಪರ್ಕ ಸಭೆಗಳು : ಬೆಳಗಾವಿ ವಿಭಾಗ

**ಗೋಕಾಕ ತಾಲ್ಲೂಕು :** ದಿನಾಂಕ : 07.09.2017ರಂದು ಗೋಕಾಕ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಜ್ಞಾನ ಮಂದಿರ, ಗೋಕಾಕ್‌ನಲ್ಲಿ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಗೆ 92 ಸೌಹಾರ್ದ ಸಹಕಾರಿಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು.





**ಬೆಳಗಾವಿ ಮತ್ತು ಖಾನಾಪೂರ ತಾಲ್ಲೂಕು :** ದಿನಾಂಕ : 08.09.2017ರಂದು ಬೆಳಗಾವಿ ಮತ್ತು ಖಾನಾಪೂರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಕನ್ನಡ ಸಾಹಿತ್ಯ ಭವನ", ಬೆಳಗಾವಿಯಲ್ಲಿ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಗೆ 121 ಸೌಹಾರ್ದ ಸಹಕಾರಿಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೈಲಹೊಂಗಲ ತಾಲ್ಲೂಕು :** ದಿನಾಂಕ : 08.09.2017ರಂದು ಬೈಲಹೊಂಗಲ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಶ್ರೀ ಬಾಲಾಜಿ ಕಲ್ಯಾಣ ಮಂಟಪ, ಬೈಲಹೊಂಗಲದಲ್ಲಿ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಗೆ 35 ಸೌಹಾರ್ದ ಸಹಕಾರಿಗಳಿಂದ 53 ಪ್ರತಿನಿಧಿಗಳು ಭಾಗವಹಿಸಿದ್ದರು.





**ಹುಕ್ಕೇರಿ ತಾಲ್ಲೂಕು :** ದಿನಾಂಕ : 09.09.2017ರಂದು ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಶ್ರೀ ಗುರುಶಾಂತೇಶ್ವರ ಮಠ", ಹುಕ್ಕೇರಿಯಲ್ಲಿ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಗೆ 40 ಸೌಹಾರ್ದ ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿದ್ದರು.

**ಸಂಕೇಶ್ವರ ತಾಲ್ಲೂಕು :** ದಿನಾಂಕ : 09.09.2017ರಂದು ಸಂಕೇಶ್ವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಶ್ರೀ ಸಾಯಿ ಭವನ, ಸಂಕೇಶ್ವರದಲ್ಲಿ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಗೆ 68 ಸೌಹಾರ್ದ ಸಹಕಾರಿಗಳಿಂದ 120 ಪ್ರತಿನಿಧಿಗಳು ಭಾಗವಹಿಸಿದ್ದರು.





### ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಕಛೇರಿಗೆ ಭೇಟಿ

ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಮತ್ತು ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರು ಬೆಂಗಳೂರು ವಿಭಾಗೀಯ ಕಛೇರಿಗೆ ಭೇಟಿ ನೀಡಿ, ವಿಭಾಗೀಯ ಸಿಬ್ಬಂದಿಗಳ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ಪಡೆದರು ಮತ್ತು ಸಿಬ್ಬಂದಿಗಳು ಪರಿಣಾಮಕಾರಿಯಾಗಿ ಕೆಲಸಗಳನ್ನು ನಿರ್ವಹಿಸಲು ಮಾರ್ಗದರ್ಶನ ನೀಡಿದರು.

## ಸಂಪರ್ಕ ಸಭೆ ಹಾಗೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕುರಿತು ಉಪನ್ಯಾಸ ಕಾರ್ಯಕ್ರಮ : ಬೆಂಗಳೂರು ವಿಭಾಗ



**ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಕೋಲಾರ ಜಿಲ್ಲೆಗಳು** : ದಿನಾಂಕ 06.09.2017ರಂದು ಬೆಂಗಳೂರಿನ ಪಾರಿಜಾತ ಹೋಟೆಲ್ ಇಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಕೋಲಾರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ.ಎಸ್.ಗುಂಡುರಾವ್, ಶ್ರೀ ಬಿ.ಗಂಗಾಧರಯ್ಯ, ಶ್ರೀ ಜಿ.ಎನ್.ಪಾಟೀಲ್, ಶ್ರೀ ಮಂಜುನಾಥ ಮತ್ತು ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ ಹಾಗೂ ನಿಕಟ ಪೂರ್ವ ನಿರ್ದೇಶಕರಾದ ಶ್ರೀ ಆಂಜನೇಯ ಗುಪ್ತ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 120 ಸೌಹಾರ್ದ ಸಹಕಾರಿಗಳಿಂದ 183 ಪ್ರತಿನಿಧಿಗಳು ಸೇರಿದಂತೆ ಒಟ್ಟು 212 ಜನರು ಭಾಗವಹಿಸಿದ್ದರು.



**ತುಮಕೂರು** : ದಿನಾಂಕ : 11.09.2017ರಂದು ತುಮಕೂರಿನ ಎಸ್‌ಐಟಿ ಮಿಡಿಯಾ ಸೆಂಟರ್‌ನಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ.ಗಂಗಾಧರಯ್ಯ, ಶ್ರೀ ಬಿ.ಎಸ್.ಗುಂಡುರಾವ್ ಹಾಗೂ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್.ಕೆ.ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 75 ಸೌಹಾರ್ದ ಸಹಕಾರಿಗಳಿಂದ 114 ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ** : ದಿನಾಂಕ : 12.09.2017ರಂದು ಪೂಜಾ ಇಂಟರ್ ನ್ಯಾಷನಲ್ ಹೋಟೆಲ್, ದಾವಣಗೆರೆ ಇಲ್ಲಿ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ಜಿ.ನಂಜನಗೌಡ, ಶ್ರೀ ಬಿ.ಗಂಗಾಧರಯ್ಯ ಹಾಗೂ ಶ್ರೀ ಬಿ.ಎಸ್.ಗುಂಡುರಾವ್ ಮತ್ತು ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 40 ಸೌಹಾರ್ದ ಸಹಕಾರಿಗಳಿಂದ 120 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿತ್ರದುರ್ಗ** : ದಿನಾಂಕ : 12.09.2017ರಂದು ದಿ ಮರ್ಚೆಂಟ್ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಜೆ.ಸಿ.ಆರ್. ಬಡಾವಣೆಯ ಶಾಖೆ, ಚಿತ್ರದುರ್ಗ ಇಲ್ಲಿ ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ನೆರವೇರಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ನಿರ್ದೇಶಕರಾದ ಶ್ರೀ ಎಸ್. ಆರ್.ಲಕ್ಷ್ಮೀಕಾಂತರೆಡ್ಡಿಯವರು ವಹಿಸಿದ್ದರು ಮತ್ತು ನಿರ್ದೇಶಕರುಗಳಾದ ಶ್ರೀ ಜಿ.ನಂಜನಗೌಡ, ಶ್ರೀ ಬಿ.ಗಂಗಾಧರಯ್ಯ ಮತ್ತು ಶ್ರೀ ಬಿ.ಎಸ್.ಗುಂಡುರಾವ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ 40 ಸೌಹಾರ್ದ ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದರು.

## ಹೈಯರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಹೆಚ್.ಡಿ.ಸಿ.ಎಂ.) (ಕರೆಸ್ಪಾಂಡೆನ್ಸ್ ಕೋರ್ಸ್) ತರಬೇತಿಗೆ ಅರ್ಜಿ

ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು (ಆರ್.ಐ.ಸಿ.ಎಂ.) ಇವರಿಂದ ಐದನೇ 2017–18ರ 10ನೇ ಅಧಿವೇಶನದ ಹೈಯರ್ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ (ಹೆಚ್.ಡಿ.ಸಿ.ಎಂ. ಕರೆಸ್ಪಾಂಡೆನ್ಸ್ ಕೋರ್ಸ್) ತರಬೇತಿಗೆ ಪತ್ರ ವ್ಯವಹಾರದ ಮೂಲಕ ಸೇರಲು ಅಭ್ಯರ್ಥಿಗಳಿಂದ ಅರ್ಜಿಯನ್ನು ಕೋರಲಾಗಿದೆ. ತರಬೇತಿಯ ಅವಧಿ ದಿನಾಂಕ 23.10.2017 ರಿಂದ 22.04.2018ರವರೆಗೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–26692036, ಫ್ಯಾಕ್ಸ್ 080–26692537 ಅಥವಾ ಕಾರ್ಯಕ್ರಮದ ಸಮನ್ವಾಯಾಧಿಕಾರಿ ಶ್ರೀ ಪಿ.ಎನ್.ಸುರೇಶ್ 7411007095/ 9448225816 ಅಥವಾ sureshpnarayanan@gmail.com ಮೂಲಕ ಸಂಪರ್ಕಿಸಬಹುದು.

**ಶಿವಮೊಗ್ಗ :** ದಿನಾಂಕ : 13.09.2017ರಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಭವನ, ಶಿವಮೊಗ್ಗ ಇಲ್ಲಿ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎ.ಆರ್.ಪ್ರಸನ್ನಕುಮಾರ್, ಶ್ರೀ ಜಿ.ನಂಜನಗೌಡ, ಶ್ರೀ ಬಿ.ಗಂಗಾಧರಯ್ಯ ಹಾಗೂ ಶ್ರೀ ಬಿ.ಎಸ್.ಗುಂಡುರಾವ್‌ರವರು ಮತ್ತು ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 90 ಸೌಹಾರ್ದ ಸಹಕಾರಿಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು.



## ಜಿಎಸ್‌ಟಿ, ಆದಾಯ ತೆರಿಗೆ ಮತ್ತು ಇತ್ತೀಚಿನ ಸುಪ್ರೀಂ ಕೋರ್ಟ್ ತೀರ್ಪಿನ ಕುರಿತು ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ : ಕಲಬುರಗಿ ವಿಭಾಗ




**ಕೊಪ್ಪಳ :** ದಿನಾಂಕ : 07.09.2017ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಲಲಿತ ಮಹಲ್, ಗಂಗಾವತಿ, ಕೊಪ್ಪಳ ಜಿಲ್ಲೆಯಲ್ಲಿ "ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ"ಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ನಿರ್ದೇಶಕರಾದ ಶ್ರೀ ಜಿ.ಶ್ರೀಧರರವರು ಅಧ್ಯಕ್ಷತೆಯನ್ನು ವಹಿಸಿದ್ದರು. ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 100 ಸೌಹಾರ್ದ ಸಹಕಾರಿಗಳಿಂದ 140 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಳ್ಳಾರಿ :** ದಿನಾಂಕ : 07.09.2017ರಂದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹೋಟೆಲ್ ಮಲ್ಲಿಗೆ, ಹೊಸಪೇಟೆ, ಬಳ್ಳಾರಿ ಜಿಲ್ಲೆಯಲ್ಲಿ "ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ"ಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ನಿಕಟಪೂರ್ವ ನಿರ್ದೇಶಕರಾದ ಶ್ರೀ ಆನಂದ ಎಲ್.ಎಸ್ ಹಾಗೂ ಗಾಯಿತ್ರಿ ಸೌಹಾರ್ದ ಸಹಕಾರಿಯ ನಿ., ಹೊಸಪೇಟೆ ಇದರ ಅಧ್ಯಕ್ಷರಾದ ಡಾ. ಹನುಮಂತರಾವ್ ಅತಿಥಿಗಳಾಗಿ ಭಾಗವಹಿಸಿದ್ದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 69 ಸೌಹಾರ್ದ ಸಹಕಾರಿಗಳಿಂದ 95 ಪ್ರತಿನಿಧಿಗಳು ಭಾಗವಹಿಸಿದ್ದರು.





**ರಾಯಚೂರು :** ದಿನಾಂಕ : 08.09.2017ರಂದು ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿನಯ್ ರೆಸಿಡೆನ್ಸಿ, ಸಿಂಧನೂರು, ರಾಯಚೂರು ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ನಿರ್ದೇಶಕರಾದ ಶ್ರೀ ಆರ್.ತಿಮ್ಮಯ್ಯಶೆಟ್ಟಿ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ಸಿಂಧೂ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಿಂಧನೂರು ಇದರ ಅಧ್ಯಕ್ಷರಾದ ಶ್ರೀ ಬಿ.ರಾಜಶೇಖರ್ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ತರಬೇತಿಯಲ್ಲಿ 104 ಸೌಹಾರ್ದ ಸಹಕಾರಿಗಳಿಂದ 155 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

## ವಿವಿಧ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕರಗಳ ಭೇಟಿ


ಸಿದ್ದಗಂಗಾ ಮಠಕ್ಕೆ ಭೇಟಿ


ಮಾನ್ಯ ಶಾಸಕರು ಮತ್ತು ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣನವರ ಭೇಟಿ


ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ.ಅಯ್ಯಪ್ಪರವರ ಭೇಟಿ


ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ನಿ., ಮಂಡಿಪೇಟೆ, ದಾವಣಗೆರೆ ಸಹಕಾರಿಗೆ ಭೇಟಿ.


ಸೆಕ್ರೆಡ್ ಹಾರ್ಟ್ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ಭೇಟಿ.


ಸಾರಸ್ವತ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಸಹಕಾರಿಗೆ ಭೇಟಿ.


ಶ್ರೀ ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಗೆ ಭೇಟಿ.


ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ-ಆಪರೇಟಿವ್ ಲಿ., ದಾವಣಗೆರೆ ಸಹಕಾರಿಗೆ ಭೇಟಿ.



ಕೆಂಪೇಗೌಡ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ತುಮಕೂರು ಸಹಕಾರಿ ಬ್ಯಾಂಕ್‌ಗೆ ಭೇಟಿ.


ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ಭೇಟಿ.



**ರಾಯಚೂರು :** ಅಕ್ಷಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ರಾಯಚೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಆರ್.ತಿಮ್ಮಯ್ಯಶೆಟ್ಟಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಂಟ್ನಾಳ್ ವೆಂಕಟೇಶ್, ಉಪಾಧ್ಯಕ್ಷರಾದ ಶ್ರೀ ದೇವನಪಲ್ಲಿ ವಾಸುದೇವ್ ಮತ್ತು ನಿರ್ದೇಶಕರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳು ಉಪಸ್ಥಿತರಿದ್ದರು.



**ಸಿಂಧನೂರು :** ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಆರ್.ತಿಮ್ಮಯ್ಯಶೆಟ್ಟಿಯವರಿಗೆ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು.



**ಮಾನವಿ :** ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಆರ್.ತಿಮ್ಮಯ್ಯಶೆಟ್ಟಿಯವರು ಭೇಟಿ ನೀಡಿದ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಸಿಬ್ಬಂದಿ ವರ್ಗದವರು ಅವರುಗಳಿಗೆ ಸನ್ಮಾನಿಸಿ, ಗೌರವಿಸಲಾಯಿತು.



**ವಿಜಯಪುರ :** ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಭೇಟಿ ನೀಡಿದ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು.

## ಸನ್ಮಾನ ಸಮಾರಂಭ

**ಕಾರಟಗಿ :** ಸಹಕಾರ ಭಾರತಿ, ಕೊಪ್ಪಳ ಘಟಕ ಹಾಗೂ ಕಾರಟಗಿ ತಾಲ್ಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳಿಂದ ದಿನಾಂಕ : 07.09.2017ರಂದು ಸನ್ಮಾನ ಸಮಾರಂಭವನ್ನು ಆಯೋಜಿಸಲಾಗಿತ್ತು.

ಈ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರಿಗೆ ಹಾಗೂ ನಿರ್ದೇಶಕರುಗಳಾಗಿ ಆಯ್ಕೆಯಾಗಿರುವ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ವೈ.ಟಿ.ಪಾಟೀಲ, ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಸಂಜೀವ ಮಹಾಜನ, ಶ್ರೀ ಜಿ.ಶ್ರೀಧರ್‌ರವರುಗಳಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ




ಜಿ. ಪಾಟೀಲರವರಿಗೆ ಮತ್ತು ಗಣ್ಯರುಗಳಿಗೆ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ರಮೇಶ್ ವೈದ್ಯ ಹಾಗೂ ಕಾರಟಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು ಮತ್ತು ಗಣ್ಯರು ಉಪಸ್ಥಿತರಿದ್ದರು.

## ಪತ್ರಿಕಾ ಗೋಷ್ಠಿ



ದಿನಾಂಕ : 07.09.2017ರಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಪತ್ರಿಕಾ ಗೋಷ್ಠಿ.



ದಿನಾಂಕ : 08.09.2017ರಂದು ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಪತ್ರಿಕಾ ಗೋಷ್ಠಿ.

## ಸಹಕಾರಿಯ ಉದ್ಘಾಟನೆ



**ಮಂಗಳೂರು :** ಪರಿಯಾಳ ಸೌಹಾರ್ದ ಸಹಕಾರಿ ನಿ., ಕಾವೂರು ಸಹಕಾರಿಯ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್‌ರವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಸಹಕಾರಿಯ ಭದ್ರತಾ ಕೋಶ ಮತ್ತು ಗಣಕೀಕರಣ ಉದ್ಘಾಟನೆಯನ್ನು ಹಮ್ಮಿಕೊಳ್ಳಲಾಗಿತ್ತು ಹಾಗೂ ಪ್ರಥಮ ಶೇರು ಸರ್ಟಿಫಿಕೇಟ್ ಮತ್ತು ಠೇವಣಿ ಪತ್ರವನ್ನು ವಿತರಣೆ ಮಾಡಲಾಯಿತು.

## ಶಾಖೆ ಉದ್ಘಾಟನೆ



ದಿನಾಂಕ : 04.09.2017ರಂದು ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ಹುಕ್ಕೇರಿ ಶಾಖೆಯ ಉದ್ಘಾಟನೆಯು ಪಟ್ಟಣಶೆಟ್ಟಿ ಚಾಳ ಹುಕ್ಕೇರಿಯಲ್ಲಿ ಮತ್ತು ಸುಲ್ತಾನಪೂರ ಶಾಖೆಯ ಉದ್ಘಾಟನೆಯು ಶೀಗಿಹೊಳಿ ಕಟ್ಟಡ, ಸುಲ್ತಾನಪೂರದಲ್ಲಿ ಜರುಗಿತು.



## ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ

**ಕಲಬುರಗಿ :** ಜೇವರ್ಗಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆಯನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಬಿ.ಆರ್.ಪಾಟೀಲರವರು ನೆರವೇರಿಸಿದರು. ಉದ್ಘಾಟನೆಯಲ್ಲಿ ಜೇವರ್ಗಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಪೀತಾಂಬರರಾವ, ಆಡಳಿತ ಮಂಡಲಿ ಸದಸ್ಯರು ಹಾಗೂ ಕಲಬುರಗಿ ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ಮತ್ತು ಸಹಕಾರಿಯ ಸಿಬ್ಬಂದಿಗಳು ಹಾಜರಿದ್ದರು.

## ಜಿ.ಎಸ್.ಟಿ. ಕಾರ್ಯಾಗಾರ

**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ಶ್ರೀ ಬಾಹುಬಲಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಾರ್ಕಳ ಇವರ ಜಂಟಿ ಆಶ್ರಯದಲ್ಲಿ ಸಹಕಾರಿಗಳಿಗೆ ಜಿ.ಎಸ್.ಟಿ. ಕುರಿತು ತರಬೇತಿ ಕಾರ್ಯಕ್ರಮವು ಉಡುಪಿಯ ನೈವೇದ್ಯ ಹೋಟೆಲ್‌ನ ಅನುಗ್ರಹ ಸಭಾಂಗಣದಲ್ಲಿ ದಿನಾಂಕ 09.09.2017ರಂದು ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಎಸ್.ಕೆ. ಇವರ ಅಧ್ಯಕ್ಷತೆಯಲ್ಲಿ ಜರುಗಿತು.



## ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ




ನವಶಕ್ತಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ.

### ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹರಪನಹಳ್ಳಿ



ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಬಾಕಿ ಉಳಿದ ಅವಧಿಗೆ ಉಪಾಧ್ಯಕ್ಷರಾದ ಶ್ರೀ ಬಿ.ಎಂ.ಮಹೇಶ್‌ರವರ ಆಯ್ಕೆ.

### ಜನಸ್ನೇಹಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜಮ್ಮಲದಿನ್ನಿ



ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಣ್ಣ ಶಂಕ್ರಪ್ಪ ಸೋಮನಾಳ ಇವರು ದಿ ಮುದ್ದೇಬಿಹಾಳ ತಾಲ್ಲೂಕಾ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

# ಸೌಭಾಗ್ಯಲಕ್ಷ್ಮೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ಅತಿಥಿ ಉಪನ್ಯಾಸ ಕಾರ್ಯಕ್ರಮ



**ಕೊಪ್ಪಳ :** ಸೌಭಾಗ್ಯಲಕ್ಷ್ಮೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ವತಿಯಿಂದ ದಿನಾಂಕ : 19.08.2017ರಂದು ಶ್ರೀ ಮಹೇಶ ಮಿಟ್ಟಲ್ ಕೋಡ್‌ರವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಅತಿಥಿ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಶ್ರೀ ಜಿ.ಶ್ರೀಧರ್‌ರವರಿಗೆ ಸಹಕಾರಿ ವತಿಯಿಂದ ಮತ್ತು ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರಿಗಳ ವತಿಯಿಂದ ಸನ್ಮಾನ ಮಾಡಲಾಯಿತು. ಉಪನ್ಯಾಸದ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್.ಕೆ ಇವರು ಮಾನವ ಸಂಪನ್ಮೂಲ ಮತ್ತು ಸಹಕಾರಿಯ ಕರ್ತವ್ಯಗಳ ವೇಗ ಹೆಚ್ಚಿಸಲು ನೂತನ ತಂತ್ರಜ್ಞಾನಗಳ ಅಳವಡಿಕೆ ಮತ್ತು ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ್ ಹಿರೇಮಠರವರು ಸಾಲ ವಸೂಲಾತಿಯ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳು ಮತು ಆಯುಷ್ ಲೈಫ್, ಕೆ.ಎಮ್. ಗ್ಲೋಬಲ್ ಬೆಂಗಳೂರು ಸಂಸ್ಥೆಯ ಡಾ॥ಹರೀಶರವರು ಉತ್ತಮ ಆರೋಗ್ಯವಂತ ಜೀವನ ಸಾಗಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು.



## "ಮಹಿಳೆಯರ ಮತ್ತು ಮಕ್ಕಳ ಆರೋಗ್ಯ" ಅರಿವು ಮಾಹಿತಿ ಕಾರ್ಯಾಗಾರ

**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಸಹ ಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಇದರ ವತಿಯಿಂದ ನಡೆಯುತ್ತಿರುವ ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಉಚಿತ ಟೈಲರಿಂಗ್ ತರಬೇತಿಯ ಶಿಬಿರಾರ್ಥಿಗಳಿಗೆ "ಮಹಿಳೆಯರ ಮತ್ತು ಮಕ್ಕಳ ಆರೋಗ್ಯ" ಮಾಹಿತಿ ಕಾರ್ಯಾಗಾರವು ದಿನಾಂಕ 31 ಆಗಸ್ಟ್ 2017ರಂದು ಕಡಬದ ಸೌರಭ ಟವರ್ಸ್‌ನ ಶ್ರೀ ಮಹಾಲಿಂಗೇಶ್ವರ ಕೌಶಲ್ಯ ತರಬೇತಿ ಕೇಂದ್ರದಲ್ಲಿ ನಡೆಯಿತು.



ಸೌಖ್ಯ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಕೋಲಾರ ಸಹಕಾರಿಯ ದಿನಾಂಕ : 23.09.2017ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆ.



ಶ್ರೀ ಜಗದ್ಗುರು ರೇಣುಕಾಚಾರ್ಯ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ.

## ಹಿರಿಯ ಸಹಕಾರಿ ಶ್ರೀ ಎಂ.ಎಂ. ಲಕ್ಷ್ಮೀನಾರಾಯಣ ನಿಧನ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಸಹಕಾರಿ ಕ್ಷೇತ್ರದ ಪ್ರಗತಿಪರ ಚಿಂತಕರೂ ಆಗಿದ್ದ ಹಿರಿಯ ಸಹಕಾರಿ ಶ್ರೀ ಎಂ.ಎಂ. ಲಕ್ಷ್ಮೀನಾರಾಯಣರವರು ಹೃದಯಾಘಾತದಿಂದ ನಿಧನರಾಗಿದ್ದಾರೆ.

ಶ್ರೀಯುತರ ನಿಧನಕ್ಕೆ ಸಂಯುಕ್ತ ಸಹಕಾರಿ ಆಡಳಿತ ಮಂಡಲಿಯು ಸಂತಾಪ ಸೂಚಿಸಿದೆ. ಸಂಯುಕ್ತ ಸಹಕಾರಿಯ ಪರವಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನಕುಮಾರರವರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ನಂತರ ಸಹಕಾರಿಯ ಆವರಣದಲ್ಲಿ ಸಂತಾಪ ಸೂಚಕ ಸಭೆ ಸೇರಿ, ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು. ಈ ಸಭೆಯಲ್ಲಿ ಕವಲೇದುರ್ಗ ಸೌಹಾರ್ದ ಸಹಕಾರಿಯ ಗೌರವಾಧ್ಯಕ್ಷರಾದ ರಾಜಗುರು ಡಾ॥ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಮಾಜಿ ಶಾಸಕರು ಹಾಗೂ ಟಾಸ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಆರಗ ಜ್ಞಾನೇಂದ್ರರವರು ಮತ್ತು ತಾಲ್ಲೂಕಿನ ಸಹಕಾರ ಸಂಸ್ಥೆಗಳ ಆಡಳಿತ ಮಂಡಲಿ ಸದಸ್ಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಜರುಗಿರುವ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು

## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್‌ನ ವಾರ್ಷಿಕ ಸಾಮಾನ್ಯ ಸಭೆ





**ಬೆಂಗಳೂರು :** ದಿನಾಂಕ 24.09.2017ರಂದು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಕೋಲಾರ ಸಹಕಾರಿಯ 2016–17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಪ್ರಧಾನ ಕಛೇರಿಯ ಸ್ವಂತ ಕಟ್ಟಡದ ಉದ್ಘಾಟನೆ, ಸಹಕಾರಿಯ 2 ಶಾಖೆಗಳ ಸ್ವಂತ ಕಟ್ಟಡಗಳ ಉದ್ಘಾಟನೆ ಹಾಗೂ 4 ಹೊಸ ಶಾಖೆಗಳ ಉದ್ಘಾಟನೆ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಿಬ್ಬಂದಿ ಬೋನಸ್ ವಿತರಣೆ ಸೇರಿದಂತೆ ಮತ್ತಿತರ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

## ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ 13ನೇ ವಾರ್ಷಿಕ ಸಾಮಾನ್ಯ ಸಭೆ

**ಕೊಪ್ಪ :** ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ., ಕೊಪ್ಪ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 06.08.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಎಸ್.ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಕೊಪ್ಪ ಗಾಯತ್ರೀ ಮಂದಿರದಲ್ಲಿ ನಡೆಯಿತು. ಸಹಕಾರಿಯ ನಿರ್ದೇಶಕರುಗಳು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿದ್ದ ಶ್ರೀ ಜಿ.ಎಸ್.ಮಹಾಬಲರವರು ಸಭೆಯಲ್ಲಿ ಉಪಸ್ಥಿತರಿದ್ದರು. ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ.1,21,21,718/–ಗಳ ಲಾಭವನ್ನು ಗಳಿಸಿದ್ದು, ಸದಸ್ಯರಿಗೆ ಶೇ.14ರಷ್ಟು ಡಿವಿಡೆಂಡ್ ನೀಡಲಾಯಿತು.

ವಿಶ್ವ ಪರಿಸರ ದಿನದ ಅಂಗವಾಗಿ ಸಹಕಾರಿ ವತಿಯಿಂದ 'ಒಬ್ಬ ವ್ಯಕ್ತಿ – ಒಂದು ವೃಕ್ಷ' ಅಭಿಯಾನ ಅಡಿಯಲ್ಲಿ ಸದಸ್ಯರ ಕುಟುಂಬಕ್ಕೆ ಒಂದರಂತೆ ಉತ್ತಮ ತಳಿಯ ಹಲಸಿನ ಸಸಿಯನ್ನು ಸಾಂಕೇತಿಕವಾಗಿ ನೀಡುವುದರೊಂದಿಗೆ ಮಾನ್ಯ ಅಧ್ಯಕ್ಷರು ಅಭಿಯಾನಕ್ಕೆ ಚಾಲನೆ ನೀಡಿದರು.



## ಶ್ರೀಪದ್ಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ವಾರ್ಷಿಕ ಸಾಮಾನ್ಯ ಸಭೆ

**ಬೆಂಗಳೂರು :** ಶ್ರೀಪದ್ಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ 2016–17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 30.07.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಳ್ಳು ಅನಂತರಾಜು ಕೆ.ಆರ್.ರವರ ಅಧ್ಯಕ್ಷತೆಯಲ್ಲಿ ನಡೆಯಿತು.





## ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ 5ನೇ ವಾರ್ಷಿಕ ಸಾಮಾನ್ಯ ಸಭೆ

**ಪರ್ಕಳ :** ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಪರ್ಕಳ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 13.08.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಚ್.ಶೆಟ್ಟಿಗಾರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ವರದಿ ವರ್ಷದಲ್ಲಿ ರೂ.5.47 ಕೋಟಿ ರೂಪಾಯಿಗೂ ಅಧಿಕ ವ್ಯವಹಾರ ನಡೆಸಿ, ರೂ.11.44 ಲಕ್ಷ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.10ರಷ್ಟು ಲಾಭಾಂಶ ಘೋಷಿಸಲಾಯಿತು.

## ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆ




**ಚಿಕ್ಕೋಡಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 03.09.2017ರಂದು ಪಟ್ಟಣದ ಹುಲಿಗೆಮ್ಮಾ ರೆಸಿಡೆನ್ಸಿ ಸಭಾಭವನದಲ್ಲಿ ನಿಪ್ಪಾಣಿಯ ಶ್ರೀ ಮಹಾತ್ಮಾ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಚಂದ್ರಕಾಂತ ಬಿ. ಕುರಬೆಟ್ಟಿ ಇವರ ಉಪಸ್ಥಿತಿಯಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠರವರ ಅಧ್ಯಕ್ಷತೆಯಲ್ಲಿ ಹಾಗೂ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ಇವರ ಸ್ವಾಗತ ಭಾಷಣದೊಂದಿಗೆ ಪ್ರಾರಂಭಿಸಲಾಯಿತು.

ಸಹಕಾರಿಯು ದಿನಾಂಕ : 31.03.2017ಕ್ಕೆ ಒಟ್ಟು 1233 ಸದಸ್ಯರು, ರೂ.35.26 ಲಕ್ಷ ಶೇರು ಬಂಡವಾಳ, ರೂ.22.88 ಲಕ್ಷ ನಿಧಿಗಳು, ರೂ.18 ಕೋಟಿ 14 ಲಕ್ಷ ಠೇವಣಿಗಳು, ರೂ.11 ಕೋಟಿ 21 ಲಕ್ಷ ಸಾಲಗಳು, ರೂ.17 ಲಕ್ಷ 53 ಸಾವಿರ ಲಾಭ ಮತ್ತು ರೂ.23 ಕೋಟಿ 57 ಲಕ್ಷ ದುಡಿಯುವ ಬಂಡವಾಳ ಹಾಗೂ ರೂ.112 ಕೋಟಿ 40 ಲಕ್ಷ ವಾರ್ಷಿಕ ವಹಿವಾಟು ನಡೆಸಿರುತ್ತದೆ.

## ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



**ಮೈಸೂರು :** ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 03.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಸ್ವಾಮಿನಾಥನ್ ಹಾಗೂ ಉಪಾಧ್ಯಕ್ಷರಾದ ಶ್ರೀ ಆರ್.ಭಗವಾನ್‌ರವರ ಉಪಸ್ಥಿತಿಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ಮೈಸೂರು ವಿಭಾಗೀಯ ಅಧಿಕಾರಿ ಶ್ರೀ ಶಿವಕುಮಾರ್ ಬಿರಾದಾರ್, ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,ನ ಮೈಸೂರು ಶಾಖಾ ವ್ಯವಸ್ಥಾಪಕರಾದ ಶ್ರೀ ರಮಾನಾಯಕ್‌ರವರು ಆಗಮಿಸಿದ್ದರು.

## ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ತೀರ್ಥಹಳ್ಳಿ :** ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ 2016-17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 04.09.2017ರಂದು ಎ.ಪಿ.ಎಂ.ಸಿ. ಪ್ರಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಂ.ಲಕ್ಷ್ಮೀನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಸಹಕಾರಿಯು ಕಳೆದ ಆರ್ಥಿಕ ವರ್ಷದಲ್ಲಿ ರೂ.24,77,41,867/-ಗಳ ಒಟ್ಟು ವಹಿವಾಟು ನಡೆಸಿದೆ. ರೂ.7,18,205/-ಗಳ ನಿವ್ವಳ ಲಾಭವನ್ನು ಗಳಿಸಿದ್ದು, ಶೇ.6ರ ಡಿವಿಡೆಂಡ್ ಘೋಷಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಬೆಂಗಳೂರು ವಿಭಾಗದಿಂದ ಆಯ್ಕೆಯಾಗಿರುವ ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರಿಗೆ ಸಹಕಾರಿ



ವತಿಯಿಂದ ಅಭಿನಂದಿಸಲಾಯಿತು ಹಾಗೂ ಸಹಕಾರಿಯಲ್ಲಿ ಅತೀ ಹೆಚ್ಚು ಅಡಿಕೆ ಮೂಟೆಗಳನ್ನು ಹಾಕಿದವರಿಗೆ ಅಭಿನಂದಿಸಲಾಯಿತು.




## ಶ್ರೀ ವಿಷ್ಣು ವಿಲಾಸ್ ಸೌಹಾರ್ದ ಪತ್ತಿನ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ

**ಸಿರುಗುಪ್ಪ :** ದಿನಾಂಕ: 08.09.2017ರಂದು ಶ್ರೀ ವಿಷ್ಣು ವಿಲಾಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಸಿರಗುಪ್ಪ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಜೆ.ಹನುಮಂತಯ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ರೂ.51.63 ಲಕ್ಷ ಲಾಭವನ್ನು ಗಳಿಸಿದ್ದು, ತಾಲ್ಲೂಕಿನ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

## ಸಾಯಿ ಗಣೇಶ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ 16ನೇ ವಾರ್ಷಿಕ ಸಾಮಾನ್ಯ ಸಭೆ



**ಉಡುಪಿ :** ಸಾಯಿಗಣೇಶ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಉಡುಪಿ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 27.08.2017ರಂದು ಹೋಟೆಲ್ ದುರ್ಗಾ ಇಂಟರ್‌ನ್ಯಾಷನಲ್‌ನಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿ.ಆರ್.ಪೈರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.14.93 ಲಕ್ಷ ಲಾಭ ಗಳಿಸಿದ್ದು, ಶೇ.15ರಷ್ಟು ಡಿವಿಡೆಂಡ್ ನೀಡಲು ಘೋಷಿಸಲಾಯಿತು.

## ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ



**ಮಾನವಿ :** ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ ಸಹಕಾರಿಯ ದಿನಾಂಕ : 03.09.2017ರಂದು ನಡೆದ 3ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ದಿ.ವೀರಯೋಧ ಅಮರೇಶ ಪಾಟೀಲ ಇವರ ಪತ್ನಿಯಾದ ಶ್ರೀಮತಿ ಸೌಮ್ಯ ಅಮರೇಶ ಪಾಟೀಲ ಇವರಿಗೆ ಅಭಿಮಾನ ಪೂರ್ವಕವಾಗಿ ಗೌರವಿಸಲಾಯಿತು.

## ಶ್ರೀ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ

**ಶಹಾಪೂರ :** ಶ್ರೀ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., ಶಹಾಪೂರ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 10.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ರಂಗಯ್ಯ ಎಸ್. ಗುತ್ತೇದಾರರವರು ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ಈ ವರ್ಷದಲ್ಲಿ ಒಟ್ಟು ರೂ.35,17,574/- ವ್ಯವಹಾರ ನಡೆಸಿದ್ದು, ರೂ.1,59,148/-ಗಳ ನಿವ್ವಳ ಲಾಭ ಗಳಿಸಿದ್ದು, ಸಹಕಾರಿಯ ಸದಸ್ಯರಿಗೆ ಶೇ.10ರಷ್ಟು ಲಾಭಾಂಶವನ್ನು ಘೋಷಿಸಿದರು.



## ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ



**ಬಂಟ್ವಾಳ :** ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಒಡಿಯೂರು ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 10.09.2017ರಂದು ಪರಮಪೂಜ್ಯ ಶ್ರೀ ಶ್ರೀಗುರುದೇವಾನಂದ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಶ್ರೀ ಎ.ಸುರೇಶ್ ರೈಯವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭದಲ್ಲಿ ಸಾಧ್ವಿ ಶ್ರೀ ಶ್ರೀ ಮಾತಾನಂದಮಯಿ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಸಹಕಾರಿಯು ವರದಿ ವರ್ಷದಲ್ಲಿ ರೂ.171.98 ಕೋಟಿ ವ್ಯವಹಾರ ನಡೆಸಿ, ರೂ.1.53 ಕೋಟಿ ಲಾಭ ಗಳಿಸಿದೆ. ಸಹಕಾರಿಯ ಸದಸ್ಯರಿಗೆ ಶೇ.15ರಂತೆ ಲಾಭಾಂಶ ನೀಡಲು ಘೋಷಿಸಿದರು.

## ನೀಲಾಂಬಿಕ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆ



**ಸಿಂಧನೂರು :** ನೀಲಾಂಬಿಕ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 10.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ವಲ್ಕಂದಿನ್ನಿ, ವಕೀಲರು ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದೇವೇಂದ್ರಗೌಡ ಹೊಸಳ್ಳಿ (ಇ.ಜೆ) ಹಾಗೂ ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಾಹಕರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಶ್ರೀ ಸಾಯಿ ಚನ್ನಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ



**ಸಿಂಧನೂರು :** ಶ್ರೀ ಸಾಯಿ ಚನ್ನಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17.09.2017ರಂದು ಶ್ರೀ ಲಕ್ಷ್ಮೀ ರೆಸಿಡೆನ್ಸಿ, ಸಿಂಧನೂರಿನಲ್ಲಿ ಜ್ಯೋತಿ ಬೆಳಗಿಸುವುದರ ಮೂಲಕ ಶ್ರೀ ಎಂ.ಲೋಕನಗೌಡ, ಅಧ್ಯಕ್ಷರು ಮತ್ತು ನಿರ್ದೇಶಕ ಮಂಡಲಿ ಇವರು ಉದ್ಘಾಟಿಸಿದರು. ಸಹಕಾರಿಯು ರೂ. 45.92 ಲಕ್ಷ ಲಾಭ ಗಳಿಸಿದ್ದು, ಶೇ.18ರಷ್ಟು ಲಾಭಾಂಶವನ್ನು ಸದಸ್ಯರಿಗೆ ಹಂಚಲು ತೀರ್ಮಾನಿಸಲಾಯಿತು.

## ಜೀವನ ಸ್ಫೂರ್ತಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



**ಹಾವೇರಿ :** ಜೀವನಸ್ಫೂರ್ತಿ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 15.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಯರಾಮ ಆರ್. ಮಾಳಾಪೂರರವರ ಅಧ್ಯಕ್ಷತೆಯಲ್ಲಿ ಜರುಗಿತು.

## ಶ್ರೀ ಶಾಂತವೀರೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆ



**ಹಾವೇರಿ :** ಶ್ರೀ ಶಾಂತವೀರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾವೇರಿ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 10.09.2017ರಂದು ಶ್ರೀ ಕಾಳಿಕಾಂಬಾ ದೇವಸ್ಥಾನದ ಆವರಣದಲ್ಲಿ ಶ್ರೀ ಬಸವರಾಜ ಚಂದ್ರಶೇಖರ ಬಿಂಕದಕಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆ



**ಬೆಲ್ಲದ ಬಾಗೇವಾಡಿ :** ದಿನಾಂಕ : 13.09.2017ರಂದು ಬ್ಯಾಂಕಿನ 2016–17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿ. ವಿಶ್ವನಾಥ ಕತ್ತಿ ಸ್ಮಾರಕ ಸಭಾ ಭವನದಲ್ಲಿ ಜರುಗಿತು. ವರದಿ ವರ್ಷದಲ್ಲಿ ಬ್ಯಾಂಕು ರೂ. 125.45 ಲಕ್ಷ ನಿವ್ವಳ ಲಾಭ ಗಳಿಸುವುದರೊಂದಿಗೆ ಒಟ್ಟು NPA 0.03 ಇರುತ್ತದೆ. ಇದೇ ಸಂದರ್ಭದಲ್ಲಿ ಬ್ಯಾಂಕಿನ ಉತ್ತಮ ಗ್ರಾಹಕರನ್ನು ಗುರುತಿಸಿ, ಅವರನ್ನು ಸನ್ಮಾನಿಸಲಾಯಿತು.

## ಹೇಮಾದ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ



**ತೀರ್ಥಹಳ್ಳಿ :** ಹೇಮಾದ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 13.09.2017ರಂದು ನೆರವೇರಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ನೂತನ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರನ್ನು ಸನ್ಮಾನಿಸಲಾಯಿತು.

## ಬಸವ ಸೌಹಾರ್ದ ಕ್ರೆಡಿಟ್ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



**ಬೈಲಹೊಂಗಲ :** ದಿನಾಂಕ : 16.09.2017ರಂದು ಬಸವ ಸೌಹಾರ್ದ ಕ್ರೆಡಿಟ್ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹಾಂತೇಶ ತಟವಾಟಿ, ಮಾನ್ಯ ಮಾಜಿ ಶಾಸಕರಾದ ಶ್ರೀ ಜಗದೀಶ ಮೆಟಗುಡ್ಡ ಹಾಗೂ ಸಂಸ್ಥಾಪಕರಾದ ಶ್ರೀ ವಿಜಯ ಶ್ರೀ ಮೆಟಗುಡ್ಡ ಇವರು ಉದ್ಘಾಟಿಸಿದರು. ಸಹಕಾರಿಯು 2016–17ನೇ ಸಾಲಿನಲ್ಲಿ ನಿವ್ವಳ ಲಾಭ ರೂ.40,98,999/– ಗಳಿಸಿದ್ದು, ಸದಸ್ಯರಿಗೆ ಶೇ.10ರಷ್ಟು ಡಿವಿಡೆಂಡ್ ನೀಡುವುದಾಗಿ ಘೋಷಿಸಿದರು. ಸಹಕಾರಿಯ ವಾರ್ಷಿಕ ವಹಿವಾಟು ರೂ.59,45,35,606/–ಗಳಷ್ಟಿರುತ್ತದೆ.




## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ

**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ:10.09.2017ರಂದು ಪುತ್ತೂರಿನ ಶ್ರೀ ಲಕ್ಷ್ಮೀವೆಂಕಟರಮಣ ದೇವಳದ ಶ್ರೀ ಸುಕೃತೀಂದ್ರ ಕಲಾಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ವರ್ಷಾಂತ್ಯಕ್ಕೆ ರೂ.2.76 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.13ರಷ್ಟು ಡಿವಿಡೆಂಡ್ ನೀಡುವುದಾಗಿ ಸಭೆಯು ನಿರ್ಧರಿಸಿತು.

## ಜನಹಿತ ಸೌಹಾರ್ದ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆ

**ಉಡುಪಿ :** ಜನಹಿತ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 09.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಪಾಲ್ ಯು. ಇವರ ಅಧ್ಯಕ್ಷತೆಯಲ್ಲಿ ಉಡುಪಿಯ ಹೋಟೆಲ್ ನೈವೇದ್ಯದ ಅನುಗ್ರಹ ಸಭಾಂಗಣದಲ್ಲಿ ನಡೆಯಿತು. ಸಹಕಾರಿಯ ಸದಸ್ಯರಿಗೆ ಶೇ.7ರಷ್ಟು ಡಿವಿಡೆಂಡ್ ಘೋಷಿಸಲಾಯಿತು.



## ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ



**ವಿಜಯಪುರ :** ದಿನಾಂಕ : 17.09.2017ರಂದು ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಚ. ಹಿರೇಮಠರವರ ಅಧ್ಯಕ್ಷತೆಯಲ್ಲಿ ಮತ್ತು ಉಪಾಧ್ಯಕ್ಷರಾದ ಶ್ರೀಮತಿ ನಂದಾ. ಸ. ಕಾಖಂಡಕಿಮಠ ಹಾಗೂ ನಿರ್ದೇಶಕರ ಉಪಸ್ಥಿತಿಯಲ್ಲಿ ಜೋರಾಪುರ ಪೇಠದಲ್ಲಿರುವ ಮಲ್ಲಿಕಾರ್ಜುನ ಗುಡಿಯಲ್ಲಿ ಜರುಗಿತು.

## ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



**ಕೊಪ್ಪ :** ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 23.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎನ್.ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಗಾಯತ್ರಿ ಮಂದಿರ, ಕೊಪ್ಪ ಇಲ್ಲಿ ನಡೆಯಿತು.

## ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆ

**ಹಾನಗಲ್ಲ :** ದಿನಾಂಕ : 18.09.2017ರಂದು ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾನಗಲ್ಲ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಬಿ.ಕಲಾಲ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಎಂ.ಉದಾಸಿ, ಮಾನ್ಯ ಮಾಜಿ ಲೋಕೋಪಯೋಗಿ ಸಚಿವರು, ಕರ್ನಾಟಕ ಸರಕಾರ ಹಾಗೂ ಶ್ರೀ ಶಿವಕುಮಾರ ಉದಾಸಿ, ಮಾನ್ಯ ಲೋಕಸಭಾ ಸದಸ್ಯರು, ಹಾವೇರಿ ಕ್ಷೇತ್ರ ಮತ್ತು ಶ್ರೀ ಎ.ಎಸ್.ಬಳ್ಳಾರಿ, ಅಧ್ಯಕ್ಷರು, ಜನತಾ ಶಿಕ್ಷಣ ಸೌ.ಸ.ನಿ. ಹಾನಗಲ್ಲ ಇವರ ಉಪಸ್ಥಿತಿಯಲ್ಲಿ ಜರುಗಿತು. ಸಹಕಾರಿಯು 2016–17ನೇ ಸಾಲಿನಲ್ಲಿ ರೂ.13,14,754–38/–ಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.12ರಂತೆ



ಡಿವಿಡೆಂಡ್ ವಿತರಣೆ ಮಾಡಲು ನಿರ್ಣಯಿಸಲಾಯಿತು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಯಲ್ಲಿ ಹೆಚ್ಚಿನ ಅಂಕ ಪಡೆದಂತಹ ಸದಸ್ಯರ ಮಕ್ಕಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಎಂದು ಪ್ರತಿಭಾ ಪುರಸ್ಕಾರಗಳನ್ನು ಶ್ರೀ ಸಿ.ಎಂ.ಉದಾಸಿ, ಶ್ರೀ ಶಿವಕುಮಾರ ಉದಾಸಿ ಮತ್ತು ಶ್ರೀ ಎ.ಎಸ್.ಬಳ್ಳಾರಿ ಇವರ ಮೂಲಕ ವಿತರಿಸಲಾಯಿತು.

## ಶ್ರೀ ಶುಭ ಧನಲಕ್ಷ್ಮೀ ಸೌಹಾರ್ದ ವಿವಿಧೋದ್ಧೇಶ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆ



**ಹೊಸಪೇಟೆ :** ಶ್ರೀ ಶುಭ ಧನಲಕ್ಮೀ ಸೌಹಾರ್ದ ವಿವಿಧೋದ್ಧೇಶ ಸಹಕಾರಿ ನಿ., ಹೊಸಪೇಟೆ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 24.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಮಂಜುನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು 2016–17ನೇ ಸಾಲಿನಲ್ಲಿ ರೂ.1,85,239/–ಗಳ ನಿವ್ವಳ ಲಾಭವನ್ನು ಗಳಿಸಲಾಗಿದ್ದು, ಶೇರುದಾರರಿಗೆ ಶೇ.17ರಷ್ಟು ಡಿವಿಡೆಂಡ್ ಹಾಗೂ ಸಿಬ್ಬಂದಿಗಳಿಗೆ 1 ತಿಂಗಳ ಬೋನಸ್ ಅನ್ನು ಘೋಷಿಸಲಾಯಿತು. ಸಭೆಯಲ್ಲಿ ಸಹಕಾರಿಯ ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

## ಶ್ರೀ ಪೂರ್ಣಾನಂದ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



**ಮಂಗಳೂರು :** ಶ್ರೀ ಪೂರ್ಣಾನಂದ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಗಣೇಶ್ ಶೆಣ್ಯೈರವರ ಅಧ್ಯಕ್ಷತೆಯಲ್ಲಿ ಎನ್.ಜಿ.ಓ. ಕಟ್ಟಡದ ನೇತ್ರಾವತಿ ಸಭಾಂಗಣದಲ್ಲಿ ಜರುಗಿತು. ಈ ಸಭೆಯಲ್ಲಿ ಎಸ್.ಎಸ್.ಎಲ್.ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚುವರಿ ಅಂಕ ಪಡೆದ ಸದಸ್ಯ ಮಕ್ಕಳಿಗೆ ಪುರಸ್ಕರಿಸಲಾಯಿತು ಹಾಗೂ ಇಂಡಿಯಾ, ಶ್ರೀಲಂಕಾ ಓಪನ್ ಕರಾಟೆ ಚಾಂಪಿಯನ್‌ಶಿಪ್ ಬ್ಲಾಕ್‌ಬೆಲ್ಟ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಶ್ರೀ ನಿಹಾಲ್ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದಿಂದ "ಡಾಕ್ಟರೇಟ್" ಪದವಿಯನ್ನು ಪಡೆದ ಡಾ॥ ಜಗದೀಶ್ ಬಿ. ಇವರಿಗೆ ಗೌರವಪೂರ್ವಕ ಅಭಿನಂದನೆ ಮಾಡಲಾಯಿತು.

## ಹರಿಹರ ಮರ್ಚಂಟ್ಸ್ ಸೌಹಾರ್ದ ಕೋ–ಆಪರೇಟಿವ್‌ನ 3ನೇ ವಾರ್ಷಿಕ ಸಾಮಾನ್ಯ ಸಭೆ

**ಹರಿಹರ :** ಹರಿಹರ ಮರ್ಚಂಟ್ಸ್ ಸೌಹಾರ್ದ ಕೋ–ಆಪರೇಟಿವ್ ನಿ., ಹರಿಹರ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಎಂ. ನಾಗರಾಜರವರು ಉದ್ಘಾಟಿಸಿದರು. ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ.ಕೆ. ವೀರಣ್ಣ ಮತ್ತು ನಿರ್ದೇಶಕರುಗಳು ಉಪಸ್ಥಿತರಿದ್ದರು.





ಕೊಂಕಣ್ ಕ್ಯಾಥೊಲಿಕ್ ವಿವಿಧೋದ್ಧೇಶ ಸೌಹಾರ್ದ ಸಹಕಾರಿ ನಿ., ಕಾರ್ಕಳ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ನವಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿಗ್ಗಾಂವ್ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ವಿಜಾಪುರರವರ ಅಧ್ಯಕ್ಷತೆಯಲ್ಲಿ ಜರುಗಿತು.

## ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ

**ಬೆಂಗಳೂರು :** ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಣಸಮಾರನಹಳ್ಳಿ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 03.09.2017ರಂದು ಜರುಗಿತು. ಈ ಸಭೆಯ ನಿಮಿತ್ತ ಮತ್ತು ಸಾಮಾಜಿಕ ಜವಾಬ್ಧಾರಿ ಮೇರೆಗೆ ಹುತಾತ್ಮ ಯೋಧ ಹನುಮಂತಪ್ಪ ಕೊಪ್ಪದರವರ ಪತ್ನಿ ಶ್ರೀಮತಿ ಮಹಾದೇವಿರವರಿಗೆ ಸನ್ಮಾನ ಮಾಡಲಾಯಿತು. ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್.ಕೆ ಹಾಗೂ ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆ, ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಪುಟ್ಟಶಾಮಪ್ಪ, ಉಪಾಧ್ಯಕ್ಷರಾದ ಶ್ರೀ



ವೀರೇಶ್, ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಜಿ ಹೆಗಡೆ, ಖ್ಯಾತ ಚಲನಚಿತ್ರ ನಟಿ ಮೌರ್ಯಾನಿ, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಡಿ.ಎಸ್. ವೆಂಕಟಾಚಲಪತಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



# "ಆ ಎರಡು ಪದಗಳು"

ಬಿ.ಎ. ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ

**ಐಸಾಕ್ ನ್ಯೂಟನ್ ಒಬ್ಬ ರೈತನ ಮಗ. ಗುರುತ್ವಾಕರ್ಷಣ ನಿಯಮವನ್ನು ಜಗತ್ತಿಗೇ ನೀಡಿ ಯಶೋವಂತರಾದರು. ಅಬ್ರಹಾಂ ಲಿಂಕನ್ ತಂದೆ ಒಬ್ಬ ಮರಗೆಲಸದವ. ಆದರೆ, ಲಿಂಕನ್ ವಿಶ್ವದ ಅತ್ಯಂತ ಅಧಿಕಾರಯುತವಾದ ಅಮೇರಿಕಾದ ಅಧ್ಯಕ್ಷರಾದರು. ಥಾಮಸ್ ಅಲ್ವಾ ಎಡಿಸನ್ ಒಬ್ಬ ಪ್ರವಾಸಿ ಗೃಹ ನಡೆಸುವಾತನ ಮಗ. ಆದರೆ, ವಿದ್ಯುತ್ ದೀಪ, ಗ್ರಾಮಾಫೋನ್ ಕಂಡುಹಿಡಿದು ಶ್ರೇಷ್ಠ ವಿಜ್ಞಾನಿಯಾದರು.**



ಚಳಿಗಾಲದಲ್ಲಿ ಒಂದು ದಿನ ಮಿಡತೆಯೊಂದು ಹಸಿವೆಯಿಂದ ಕಂಗಾಲಾಗಿದೆ. ಅದು ಇರುವೆಗಳ ಬಳಿ ಹೋಗಿ "ನನಗೆ ಹಸಿವಾಗಿದೆ ತಿನ್ನಲು ಏನಾದರೂ ಕೊಡಿ" ಎಂದು ಕೇಳಿತು. ಆಗ ಇರುವೆಗಳು "ನಾವು ಬೇಸಿಗೆಯಲ್ಲಿ ಆಹಾರವನ್ನು ಸಂಗ್ರಹಿಸುತ್ತೇವೆ. ನೀನೂ ಕೂಡಾ ಹಾಗೇಕೆ ಮಾಡಬಾರದು? ಎಂದು ಪ್ರಶ್ನಿಸುತ್ತವೆ. ಅದಕ್ಕೆ ಮಿಡತೆ "ಬೇಸಿಗೆಯಲ್ಲಿ ನಾನು ಹೇಗೆ ತಾನೆ ಆಹಾರವನ್ನು ಸಂಗ್ರಹಿಸಲಿ, ಬೇಸಿಗೆಯ ಆ ದಿನಗಳು ಎಷ್ಟು ಆನಂದವಾಗಿರುತ್ತದೆ. ಆ ದಿನಗಳಲ್ಲಿ ಹಾರುತ್ತೇನೆ, ಆನಂದಿಸುತ್ತೇನೆ, ಹಾಯಾಗಿ ಕಳೆಯುತ್ತೇನೆ" ಎಂದು ಹೇಳಿತು. "ಹಾಗಾದರೆ ನಿನ್ನಂತಹವರು ಹಸಿವೆಯಿಂದ ಒದ್ದಾಡಿ ಸಾಯುವುದು ಒಳ್ಳೆಯದು" ಎಂದು ಇರುವೆಗಳು ಮಿಡತೆಯನ್ನು ಹೊರಹಾಕಿದವು.

ಆದರೆ, ಕಷ್ಟಪಟ್ಟು ದುಡಿಯುವವರು ಯಾರೂ ಉಪವಾಸ ಬೀಳಬೇಕಾಗಿಲ್ಲ. ದುಡಿಮೆ ಕಡಿಮೆಯಾದರೆ ಮಾತ್ರ ಸಂಪತ್ತು ಭಾಗ್ಯಗಳು ಕಡಿಮೆಯಾಗುತ್ತವೆ. ಒಂದು ಕುಟುಂಬದ, ಒಂದು ಸಮಾಜದ, ಒಂದು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲು ಬೇರೆ ಯಾವ ಉಪಾಯವೂ ಇಲ್ಲ. ಶಾರ್ಟ್‌ಕಟ್ ಇಲ್ಲವೇ ಇಲ್ಲ. ಇರಬೇಕಾಗಿರುವುದು "ಆ ಎರಡು ಪದಗಳನ್ನು" ಅರ್ಥಮಾಡಿಕೊಂಡು ಅದರಂತೆ ಮುಂದುವರಿಯುವ ಕ್ರಿಯಾಶಕ್ತಿ ಮಾತ್ರ !

ಎತ್ತರವನ್ನು ನೋಡಿ ನನ್ನ ಗುರಿ, ನಾನು ಸಾಧಿಸಬೇಕಾದ ಕನಸು ಎಂದು ಕೊಂಡು ಹೊರಟರೆ ಯಾವ ಎತ್ತರವೂ ನಮಗೆ ಎತ್ತರವಾಗುವುದೇ ಇಲ್ಲ. ಆಮೇಲೆ, ಎತ್ತರಗಳನ್ನು ಏರುವುದೇ ಬದುಕಿನ ಒಂದು ಆಟವಾಗಿ ಹೋಗುತ್ತದೆ. ಇದಕ್ಕೆ ಇಡೀ ಬದುಕು ಖರ್ಚಾದರೂ ಪರವಾಗಿಲ್ಲ. ಆದರೆ, ಆಗಾಗ ಗಳಿಸುವ ಸಾರ್ಥಕತೆ ನಮಗೆ ಆನಂದ ತರುತ್ತದೆ. ಈ ಆನಂದದ ಮೂಲ "ಆ ಎರಡು ಪದಗಳಲ್ಲಿ" ಅಡಗಿದೆ.

ನಮ್ಮಿಂದ ಸಾಧ್ಯವಿಲ್ಲ ಎಂದು ಹೇಳುವವರು ಕೈಲಾಗದವರು. ಏಕೆ ಸಾಧ್ಯವಿಲ್ಲ? ನಾನು ಮಾಡಿಯೇ ತೀರುತ್ತೇನೆ ಎನ್ನುವವರು ಕೈಲಾಗುವವರು. ಪ್ರಪಂಚದಲ್ಲಿ ಏನನ್ನಾದರೂ ಒಳ್ಳೆಯದನ್ನು ಸಾಧಿಸಲು ಸಾಧ್ಯವಿದೆ ಎನ್ನುವುದಾದರೆ ಅದು ಕೈಲಾಗುವವರಿಂದ ಮಾತ್ರ. "ಆ ಎರಡು ಪದಗಳನ್ನು" ಗೌರವಿಸುವವರಿಂದ ಮಾತ್ರ. ಇರುವೆ ಎಷ್ಟು ಚಿಕ್ಕ ಪ್ರಾಣಿ. ಅದಕ್ಕೆ ಬೇಸರವೆಂಬುವುದೇ ಇಲ್ಲ. ಅದು ಶಾಂತವಾಗಿ ಒಂದೇ ಕಡೆ ಕುಳಿತಿದ್ದನ್ನು, ನಿದ್ದೆ ಮಾಡಿದ್ದನ್ನು ನಾವು ಕಂಡಿಲ್ಲ. ಒಂದೇ ಸಮ ತಿರುಗುತ್ತಾ ತನ್ನ ದೇಹದ ಭಾರಕ್ಕಿಂತ ಎಷ್ಟೋ ಪಟ್ಟು ಅಧಿಕ ಭಾರವನ್ನು ಅದು ಹೊರುತ್ತದೆ.

ಜೇನು ನೊಣ ಸದಾ ಹೂವಿನಿಂದ ಹೂವಿಗೆ ಹಾರುತ್ತ ಮಧುವನ್ನು ಸಂಗ್ರಹಿಸುತ್ತದೆ. ಆ ಮಧುವಿನ ಸವಿಯೂಟವನ್ನು ಇತರರಿಗೆ ನೀಡುವಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ.

ಪುಟ್ಟ ಗುಬ್ಬಚ್ಚಿ ದಿನವೆಲ್ಲ ಅತ್ತಿಂದಿತ್ತ ಹಾರುತ್ತಾ ತನ್ನ ಗೂಡಿಗಾಗಿ ಹುಲ್ಲು ಕಡ್ಡಿಗಳನ್ನು ಸಂಗ್ರಹಿಸಿ ಗೂಡನ್ನು ಕಟ್ಟುತ್ತದೆ. ತನಗಾಗಿ, ತನ್ನ ಮರಿಗಳಿಗಾಗಿ ಆಹಾರವನ್ನು ಹುಡುಕಿ ತರುತ್ತದೆ. ಮರದ ಎಲೆಗಳು ಕೂಡಾ ತೂಗುತ್ತಾ, ಬೀಸುತ್ತಾ ಗಾಳಿಯಲ್ಲಿರುವ ಜೀವರಸವನ್ನು ಹೀರಿಕೊಳ್ಳುತ್ತವೆ. ಇರುವೆ, ಜೇನು, ಗುಬ್ಬಚ್ಚಿಗಳು ಚಿಕ್ಕ ಜೀವಿಗಳು. ಸದಾ ದುಡಿಯುತ್ತವೆ. ಬುದ್ಧಿ ಇಲ್ಲದ ಪ್ರಾಣಿ-ಪಕ್ಷಿಗಳು ಇಷ್ಟೊಂದು ಪರಿಶ್ರಮಿಗಳಾಗಿರುವಾಗ, ಮನಸ್ಸು ಬುದ್ಧಿ ಮತ್ತು ಆತ್ಮಗಳು ಹೊಂದಿರುವ ನಾವು ಸಾಧನೆಯ ಉತ್ತುಂಗಕ್ಕೆ ಏರಲು ಸಾಧ್ಯವಿಲ್ಲವೆ?

ಖಂಡಿತವಾಗಿಯೂ ಸಾಧ್ಯವಿದೆ... ಆದರೆ, "ಆ ಎರಡು ಪದಗಳ" ಮಹತ್ವವನ್ನು ಅರ್ಥ ಮಾಡಿಕೊಂಡಾಗ ಮಾತ್ರ ಸಾಧ್ಯವಿದೆ. ಆ ಎರಡು ಪದಗಳನ್ನು ಅಕ್ಷರಶಃ ಅರ್ಥ ಮಾಡಿಕೊಂಡು, ಅದರಂತೆ ನಡೆದುಕೊಂಡು ಜೀವನದಲ್ಲಿ ಯಶಸ್ಸನ್ನು ಸಾಧಿಸಿದ ನೂರಾರು ಸಾಧನಾಶೀಲರ ಉದಾಹರಣೆಗಳು ನಮ್ಮ ಮುಂದಿವೆ. ಈ ಸಾಧನಾಶೀಲರು ಯಶಸ್ಸಿನ ಕಿರೀಟವನ್ನು ಧರಿಸುವ ಮೊದಲು ಅರ್ಥಮಾಡಿಕೊಂಡಿದ್ದು, ಕೇವಲ "ಆ ಎರಡು ಪದಗಳು" ಮಾತ್ರ.

ಬಹುಶಃ "ಆ ಎರಡು ಪದಗಳು" ಅವರ ಜೀವನದಲ್ಲಿ ಮ್ಯಾಜಿಕ್‌ನಂತೆ ಕೆಲಸ ಮಾಡಿರಲೇಬೇಕು.

ಇಲ್ಲದಿದ್ದರೆ... ಉಡುಪಿಯ ಮಣಿಪಾಲದಲ್ಲಿ, ಪೈಗಳ ಸಾಮ್ರಾಜ್ಯ ಕಟ್ಟಿದ ಡಾ॥ಟಿ. ಎಂ.ಪೈ; ಟಿ.ವಿ.ಎಸ್.ನ ಬೃಹತ್ ಉದ್ಯಮವನ್ನು ನಿರ್ಮಿಸಿದ ಟಿ.ವಿ.ಸುಂದರಂ ಅಯ್ಯಂಗಾರ್; ಸೋನಿ ಎಲೆಕ್ಟ್ರಾನಿಕ್ಸ್ ಕಂಪನಿಯ ಅಧಿಪತಿ ದಿಲೀಪ್ ಛಬ್ರಿಯಾ; ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ಪ್ರಸಾರವಾದ ಮಂಗಳ ಪತ್ರಿಕೆಯ ಎಮ್.ಸಿ. ವರ್ಗೀಸ್; ಪ್ರಪಂಚದ ಶ್ರೀಮಂತ ಕಂಪನಿಗಳಲ್ಲಿ ಒಂದಾದ ರಿಲಾಯನ್ಸ್ ಕಂಪನಿಯ ರೂವಾರಿ ಧೀರೂಬಾಯಿ ಅಂಬಾನಿ; ಇನ್‌ಫೋಸಿಸ್ ನಿರ್ಮಾತ ನಾರಾಯಣ ಮೂರ್ತಿ... ಮುಂತಾದ ನೂರಾರು ಸಾಧಕರ ಸಾಲುದೀಪಗಳು



## "ಏಕಾಕಿತನವ ತೊರೆ ಸಾಂಘಿಕ ಜೀವನಕ್ಕಡೆ ಮಾಡಿಕೊ"
## "ಜಗವನೊತ್ತಟ್ಟಿಗಿಡುವೆನೆನೆ ನಷ್ಟವಾರಿಗೋ ಮರುಳೆ"?

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಲೋಕಾಃ ಸಮಸ್ತಾಃ ಸುಖಿನೋಭವಂತು ಎಂದು ಸರ್ವಕಾಲಿಕ ಹಿತಚಿಂತಕ ವೇದೋಕ್ತಿಗಳು ಅರುಹಿದರೆ ಕವಿವಾಣಿಯೊಂದು ಹೇಳುತ್ತದೆ "ಜೀವನವೆಂಬ ಬೆಂಗಾಡಿನಲ್ಲಿ ಬೀಸುವ ತಂಗಾಳಿಯೆಂದರೆ ಸ್ನೇಹವೊಂದೇ". ನಿಷ್ಕುರ ಪ್ರಜ್ಞೆಯ ಕವಿ ಡಿ.ವಿ.ಜಿ.ಯವರು ವ್ಯಕ್ತಿ ವಿಶಿಷ್ಟಸುಖ ಸ್ವಾರ್ಥಕ್ಕೆ ದಾರಿಯೆಂದು ತಿಳಿದು ಅದನ್ನು ವಿರೋಧಿಸುತ್ತಾರೆ. ಭವ್ಯ ಬಂಗಲೆಯನ್ನು ಕಟ್ಟಿಸಿಕೊಂಡು ಅದರ ಸುತ್ತ 10 ಅಡಿ ಕಾಂಪೌಂಡೊಂದನ್ನು ಕಟ್ಟಿಸಿಕೊಂಡು ಹೊರಗಿನ ಜನರಿವರನ್ನು ನೋಡಬಾರದು, ತಾವು ಅವರನ್ನು ನೋಡಬಾರದೆಂಬಂತೆ ಬದುಕುತ್ತಾ, ಉತ್ತಮ ತಳಿಯ ನಾಯಿಯನ್ನು ಸಾಕಿ ಅದನ್ನು ವಾಯುವಿಹಾರಕ್ಕೆ ಕರೆದೊಯ್ದು ಜನರ ಸಂಪರ್ಕವಿಲ್ಲದೇ "ತಾನಾಯಿತು ತನ್ನ ಸಂಪತ್ತಾಯಿತು ಯಾರು ಹೇಗೆ ಬದುಕಿದರೆ ತನಗೇನು" ಎನ್ನುವಂತೆ ಬದುಕುತ್ತಿರುವ ಐಶಾರಾಮಿ ವರ್ಗದವರನ್ನು ಕಂಡು ಈ ಪದ್ಯ ಬರೆದಿರಬಹುದೆನಿಸುತ್ತದೆ. ಆತ್ಮವಿಕಾಸಕ್ಕೆ ಸಂಗಾತಿತನ ಅತ್ಯಗತ್ಯವೆಂಬ ಅಂಶವನ್ನು ಸಾರುವ ಈ ಪದ್ಯವನ್ನು ಓದಿ.

**"ಪ್ರತ್ಯೇಕ ಸುಖವ ನೀಂ ಪ್ರತ್ಯೇಕ ಸಂಪದವ**
**ನತ್ಯಾಸೆಯಿಂದರಸಿ ಮಿಕ್ಕೆಲ್ಲ ಜಗವ**
**ನೊತ್ತಟ್ಟಿಗಿಡುವೆನೆನೆ ನಷ್ಟವಾಗಿರೋ ಮರುಳೆ**
**ಬತ್ತುವುದು ನಿನ್ನಾತ್ಮ ಮಂಕುತಿಮ್ಮ"**

ಪ್ರತ್ಯೇಕವಾದ ಸುಖ ಮತ್ತು ಸಂಪತ್ತನ್ನು ಅತಿಯಾದ ಆಸೆಯಿಂದ ಹುಡುಕಿಕೊಂಡು ಮಿಕ್ಕೆಲ್ಲ ಜಗತ್ತನ್ನು ದೂರವಿಡುವೆನೆಂದರೆ ನಷ್ಟವಾರಿಗೋ ಮರುಳೇ ನಿನಗಲ್ಲದೇ ಬೇರೆ ಯಾರಿಗೂ ಅಲ್ಲ ನಿನ್ನಾತ್ಮ ಸೊರಗಿ ಕೃಷವಾಗಿ ಹೃದಯ ವೈಶಾಲ್ಯತೆ ದೂರದ ಮಾತಾಗುತ್ತದೆ ಎಂದಿದ್ದಾರೆ.

"ಇಡಿಯಾದರೆ ಉಳಿದೇವು ಬಿಡಿಯಾದರೆ ಅಳಿದೇವು ಒಗ್ಗಟ್ಟಿನಲ್ಲಿ ಬಲವಿದೆ" ಎಂಬಿತ್ಯಾದಿ ವಾಕ್ಯಗಳೆಲ್ಲ ತಿಳಿಸುವುದು ಸರ್ವರ ಅಭಿವೃದ್ಧಿಗೆ ಹೆದ್ದಾರಿಯಾದ ಸಹಕಾರ ತತ್ವವನ್ನೇ.

ಸರ್ವಧರ್ಮಗ್ರಂಥಗಳು ಸಹ ಲೋಕಹಿತವನ್ನೇ ಭೋದಿಸುತ್ತವೆ. ಇದೇ ಅಂಶವನ್ನು ಮೇಲಿನ ಪದ್ಯದಲ್ಲಿ ಕವಿವರ್ಯರು ಉವಾಚಿಸುತ್ತಾ ಒಟ್ಟಾಗಿ ಬಾಳುವುದು "ಸಹ್ಯ" ಬಿಡಿಬಾಳು "ಅಸಹ್ಯ" "ಒಂಟಿತನ ನರಕ" "ಒಟ್ಟಾಗಿ ಬಾಳುವುದೇ ಸ್ವರ್ಗ"ವೆಂಬುದಾಗಿ ತಿಳಿಸಿ ದುರುಳ ಹಾಗೂ ಮರುಳರಾಗದೇ ಸರಳ ಹಾಗೂ ತರಳರಾಗಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಸಹಕಾರ ತತ್ವವನ್ನು ಮೈಗೂಡಿಕೊಳ್ಳಿರೆಂಬುದೇ ಕವಿಗಳ ಮನದಾಳದ ಉತ್ಕಟೇಚ್ಛೆಯಾಗಿದೆ.

ಆದ್ದರಿಂದ, ನಾವುಗಳು ಈ ಪದ್ಯದಿಂದ ಪ್ರೇರಿತರಾಗಿ "ಬೇರ್ಪಡಿಸುವ ಗೋಡೆಗಳಾಗದೇ ಜೋಡಿಸುವ ಸೇತುವೆಯಾಗು" (Don't be bifurcation walls but be adjoining bridges) ಎಂಬ ಅಂಶವನ್ನು ಅಳವಡಿಸಿಕೊಂಡು ಸರ್ವರ ಅಭಿವೃದ್ಧಿಗೆ ಮಹಾಮಂತ್ರವಾಗಿರುವ ಸಹಕಾರದಿಂದ ಹೆಜ್ಜೆಯಿಡೋಣ.

ನಮ್ಮ ದೇಶದಲ್ಲಿ ಬೆಳಗುತ್ತಿರಲಿಲ್ಲವೇನೋ...!

ಹಾಗಿದ್ದರೆ ಯಶೋವಂತರ ಜೀವನದಲ್ಲಿ ಮ್ಯಾಜಿಕ್‌ನಂತೆ ಕೆಲಸ ಮಾಡಿದ "ಆ ಎರಡು ಪದಗಳು" ಯಾವುವು.

ಅಲ್ಬರ್ಟ್ ಐನ್‌ಸ್ಟೀನ್ ಮೊದಲು ಒಬ್ಬ ಸಾಮಾನ್ಯ ಗುಮಾಸ್ತರು, ಮುಂದೆ ವಿಶ್ವ ಪ್ರಸಿದ್ಧ ವಿಜ್ಞಾನಿಯಾದರು. ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್‌ರವರ ಎರಡೂ ಕಾಲುಗಳಿಗೆ ಲಕ್ವ ಹೊಡೆದಿದ್ದರೂ ಅಮೆರಿಕಾದ ರಾಷ್ಟ್ರಪತಿಯಾದರು. ಹೋಮರ್ ಕುರುಡ. ಆದರೆ, ಗ್ರೀಕ್ ಭಾಷೆಯ ಮಹಾಕವಿ ಎನಿಸಿದ. ಸಿ.ಎಸ್. ಜಾನಕಿ ಎರಡೂ ಕಾಲುಗಳಿಗೆ ಪೋಲಿಯೋ ಹೊಡೆದಿದ್ದರೂ, ವಿಶ್ವವಿಖ್ಯಾತ ಈಜುಗಾರ್ತಿಯಾದರು. ಎಮ್.ಎಸ್. ಓಬೆರಾಯ್ ಸಾಮಾನ್ಯ ಗುಮಾಸ್ತರು. ವಿಶ್ವದಾದ್ಯಂತ ಅನೇಕ ಹೋಟೆಲ್‌ಗಳ ಮಾಲೀಕರಾದರು. ಕೆ.ಕೆ.ಪಟೇಲ್ ಒಬ್ಬ ರೈತನ ಮಗ. ಆದರೆ, ನಿರ್ಮಾ ಸಾಬೂನಿನ ಯಶಸ್ವಿ ಮಾರಾಟಗಾರರಾದರು. ಎರಡೂ ಕಾಲುಗಳಿಗೆ ಪೋಲಿಯೋ ಹೊಡೆದು, 25 ಶಸ್ತ್ರ ಚಿಕಿತ್ಸೆಗಳನ್ನು ಮಾಡಿಸಿಕೊಂಡಿದ್ದರೂ, ಮಾಲತಿ ಹೊಳ್ಳ ಟೇಬಲ್ ಟೆನ್ನಿಸ್ ಮತ್ತು ಡಿಸ್ಕ್ ಹಾರಿಸುವುದರಲ್ಲಿ 150ಕ್ಕೂ ಹೆಚ್ಚು ಪಾರಿತೋಷಕಗಳನ್ನು ಗಳಿಸಿದರು.

ಐಸಾಕ್ ನ್ಯೂಟನ್ ಒಬ್ಬ ರೈತನ ಮಗ. ಗುರುತ್ವಾಕರ್ಷಣ ನಿಯಮವನ್ನು ಜಗತ್ತಿಗೇ ನೀಡಿ ಯಶೋವಂತರಾದರು. ಅಬ್ರಹಾಂ ಲಿಂಕನ್ ತಂದೆ ಒಬ್ಬ ಮರಗೆಲಸದವ. ಆದರೆ, ಲಿಂಕನ್ ವಿಶ್ವದ ಅತ್ಯಂತ ಅಧಿಕಾರಯುತವಾದ ಅಮೇರಿಕಾದ ಅಧ್ಯಕ್ಷರಾದರು. ಥಾಮಸ್ ಅಲ್ವಾ ಎಡಿಸನ್ ಒಬ್ಬ ಪ್ರವಾಸಿ ಗೃಹ ನಡೆಸುವಾತನ ಮಗ. ಆದರೆ, ವಿದ್ಯುತ್ ದೀಪ, ಗ್ರಾಮಾಫೋನ್ ಕಂಡುಹಿಡಿದು ಶ್ರೇಷ್ಠ ವಿಜ್ಞಾನಿಯಾದರು. ರಾಮಾನುಜನ್ ಶ್ರೇಷ್ಠ ಗಣಿತ ತಜ್ಞರು. ಆದರೆ, ಇವರ ತಂದೆ ಬಟ್ಟೆ ಅಂಗಡಿಯ ಗುಮಾಸ್ತರು. ಸರ್ ಸಿ.ವಿ.ರಾಮನ್ ಒಬ್ಬ ಶಾಲಾ ಉಪಾಧ್ಯಾಯರ ಮಗನಾದರೂ ನೋಬೆಲ್ ಬಹುಮಾನದ ವಿಜೇತರಾದರು.

ಇದೆಲ್ಲಾ ಹೇಗೆ ಸಾಧ್ಯವಾಯಿತು. ಪವಾಡವೇನಾದರೂ ನಡೆಯಿತೆ? ಬೇರೆಯವರ ಶಿಫಾರಸ್ಸಿನಿಂದ ಇದನ್ನು ಸಾಧಿಸಿದರೆ?

ಇಲ್ಲಾ. ಪವಾಡ ನಡೆಯಲಿಲ್ಲ. ದೇವರನ್ನು ನಂಬಿ ಕೂರಲಿಲ್ಲ. ಬೇರೆಯವರ ಶಿಫಾರಸ್ಸಿಗೆ ಹಂಬಲಿಸಲಿಲ್ಲ. ಜೀವನದಲ್ಲಿ ಎಷ್ಟೇ ಕಷ್ಟ–ನಷ್ಟಗಳು ಸಂಭವಿಸಿದರೂ ಧೃತಿಗೆಡದೇ ಎಲ್ಲವನ್ನು ಮೀರಿ ನಿಂತರು. "Top is always vacant" ಎಂದು ಸಾಧಿಸಬೇಕೆಂದು ಕೊಂಡಿದ್ದನ್ನು ಸಾಧಿಸಿಯೇ ಬಿಟ್ಟರು.

ಇತಿಹಾಸದ ಓದುಗರಾಗದೇ, ಇತಿಹಾಸವನ್ನೇ ಸೃಷ್ಟಿಸಿದರು. ಹಾಗಾದರೆ ಇವರ ಯಶಸ್ಸಿನ ರಹಸ್ಯವೇನು?

ಇದರಲ್ಲಿ ರಹಸ್ಯವೇನೂ ಇಲ್ಲ. ಒಂದು ವೇಳೆ ರಹಸ್ಯವೇನಾದರೂ ಇದ್ದರೆ ಕೇವಲ "ಆ ಎರಡು ಪದಗಳಲ್ಲಿ" ಮಾತ್ರ,

**"ಆ ಎರಡು ಪದಗಳು ಯಾವುವು...??**

**"ದುಡಿಮೆಯೇ ದೇವರು"**

ಅಮೇರಿಕಾ ದೇಶದ ಬಹುದೊಡ್ಡ ಶ್ರೀಮಂತ ಹೆರ್ನಿಪೋರ್ಡ್ ತನ್ನ ಮಕ್ಕಳನ್ನು ಬೀದಿಯಲ್ಲಿ ಬೂಟ್ ಪಾಲೀಷ್ ಮಾಡಲು ಕಳುಹಿಸುತ್ತಿದ್ದನಂತೆ. "ನಾನು ಸ್ವತಃ ಬೂಟ್ ಪಾಲೀಷ್ ಮಾಡಿಯೇ ಹಣ ಸಂಪಾದಿಸಿದೆ. ನನ್ನ ಪ್ರಾಯದಲ್ಲಿ ಶ್ರೀಮಂತರಾಗಿದ್ದವರು ಇವತ್ತು ಬಡವರಾಗಿದ್ದಾರೆ. ನಾನು ಭಿಕ್ಷುಕನಾಗಿದ್ದೆ. ಈಗ ಕೋಟ್ಯಾಧೀಶನಾಗಿದ್ದೇನೆ. ಆದ್ದರಿಂದ, ನನ್ನ ಮಕ್ಕಳನ್ನು ಭಿಕ್ಷುಕರನ್ನಾಗಿ ಮಾಡಲು ಇಷ್ಟವಿಲ್ಲ" ಎಂದರು.



# ಸಾಮಾಜಿಕ ಬದಲಾವಣೆಯಲ್ಲಿ ಸಹಕಾರದ ಪಾತ್ರ

ಶ್ರೀ ಸಿ.ಎಸ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ.) ಮೈಸೂರು.

**1904ರ ಕಾಯಿದೆ ಸಾಲ ನೀಡುವುದಕ್ಕಾಗಿ ಪ್ರಾರಂಭಿಸಿದ್ದರಿಂದ ಇನ್ನಿತರ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳಿಗೆ ಅವಕಾಶವಿರಲಿಲ್ಲ. ಆದ್ದರಿಂದ, 1912ರಲ್ಲಿ 1904ರ ಕಾಯಿದೆಯನ್ನು ವಿಸ್ತರಿಸಿ ತಿದ್ದುಪಡಿ ತರಲಾಯಿತು. ಈ ಕಾಯಿದೆ ರಚನೆಯಾದ ನಂತರ, 1919ರಲ್ಲಿ ಸಂವಿಧಾನದ ಉದಾರೀಕರಣದ ಆಧಾರದ ಮೇಲೆ "ಸಹಕಾರ" ಎಂಬ ವಿಷಯವನ್ನು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲಾಯಿತು.**



"ಸಹಕಾರ" ಎಂಬ ಪದಪ್ರಯೋಗ ಮಾನವ ಹುಟ್ಟಿದ ದಿನದಂದಲೇ ಪ್ರಾರಂಭವಾಗಿದೆ. ಒಬ್ಬರು ಮತ್ತೊಬ್ಬರಿಗೆ ಸಹಾಯ ಮಾಡಿ, ಅವರನ್ನು ಆರ್ಥಿಕವಾಗಿ ಮೇಲೆ ತರುವ ಒಂದು ಪ್ರಯತ್ನ. ಈ ಪ್ರಯತ್ನಕ್ಕೆ "ಎಲ್ಲರಿಗಾಗಿ ನಾನು – ನನಗಾಗಿ ಎಲ್ಲರೂ" ಎಂಬ ಮೂಲ ತತ್ವಕ್ಕೆ ಅನುಗುಣವಾಗಿ ರಚಿಸಿಕೊಂಡ ಒಂದು ಸಂಘಟನೆ. ಇದರಲ್ಲಿ ಸಮಾನ ಮನಸ್ಕರು ಕೂಡ ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಒಂದು ಸಂಸ್ಥಾ ರೂಪ ಕೊಟ್ಟಿರುವುದು. ಸಹಕಾರ ಕಾಯಿದೆ ರಚನೆಯಾಗುವ ಪೂರ್ವದಲ್ಲಿ ಈ ರೀತಿ ಗುಂಪುಗಳನ್ನು ರಚಿಸಿಕೊಳ್ಳುತ್ತಿದ್ದ ರಾಜ್ಯಗಳಲ್ಲಿ ತಮಿಳುನಾಡು (ಚೀಟಿ), ಕೇರಳ (ಕುರಿ) ಮತ್ತು ಮಹಾರಾಷ್ಟ್ರದ (ಬಿಷೀನ್ ಕೊಲ್ಲಾಪುರ) ಮತ್ತಿತರ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿ ಇದ್ದವು.

ಭಾರತದಲ್ಲಿ ಸಹಕಾರ ಆಂದೋಲನ ಪ್ರಾರಂಭವಾಗುವ ಪೂರ್ವದಲ್ಲಿ ಯೂರೋಪ್ ರಾಷ್ಟ್ರಗಳಲ್ಲಿ ಪ್ರಾರಂಭವಾಗಿ ಬ್ರಿಟೀಷ್ ಆಳ್ವಿಕೆಯಲ್ಲಿ ಸ್ವಾತಂತ್ರ್ಯ ಹೋರಾಟವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನಿಬಂಧಕರನ್ನು ಕಾಯಿದೆಯಲ್ಲಿ ಸೇರಿಸಿ ಭಾರತಕ್ಕೆ ಒಂದು ಕಾಯಿದೆಯನ್ನು ರಚಿಸಿದರು. ಸಹಕಾರ ಕಾಯಿದೆ ರಚನೆಯಾಗುವ ಪೂರ್ವದಲ್ಲಿ, ಅಂದರೆ 1891ರಲ್ಲಿ ಪಂಜಾಬ್ ರಾಷ್ಟ್ರದಲ್ಲಿ ಒಂದು ಜಮೀನು ಕ್ರೋಢೀಕರಿಸಿ, ರೈತರ ಅನುಕೂಲಕ್ಕೆ ಒಂದು ಸಹಕಾರ ಸಂಘ ಪ್ರಾರಂಭವಾಗಿ ಅದು 1922ರವರೆಗೂ ಅಸ್ತಿತ್ವದಲ್ಲಿ ಇತ್ತು. ಮತ್ತೊಂದು ಸಹಕಾರ ಸಂಘವನ್ನು 1895ರಲ್ಲಿ ಪ್ರಾರಂಭಿಸಿ ಆ ಸಂಘದಲ್ಲಿ 22 ಗ್ರಾಮಗಳನ್ನು ಸೇರಿಸಿ ರಚಿಸಿದರೂ ಇದು ಬಹಳ ವರ್ಷಗಳು ನಡೆಯಲಿಲ್ಲ. ಬ್ರಿಟೀಷ್ ಆಳ್ವಿಕೆ ಸಮಯದಲ್ಲಿ ಸಹಕಾರ ಸಂಘಗಳ ಸ್ಥಾಪನೆಗೆ ಡೆನ್ಮಾರ್ಕ್ ಮಾದರಿಯಲ್ಲಿ ರೂಪಿಸಲು ಪ್ರಯತ್ನಿಸಲಾಯಿತು ಹಾಗೂ ಇಂಗ್ಲೆಂಡ್‌ನ ರಾಕ್‌ಡೇಲ್ ಪಯನೀಯರ್ಸ್ ರೂಪಿಸಿ, ಗ್ರಾಹಕ ಚಳುವಳಿ ಬೆಳವಣಿಗೆಗಳನ್ನು ಗಮನದಲ್ಲಿರಿಸಿಕೊಳ್ಳಲಾಯಿತು.

ಭಾರತದ ಸಹಕಾರ ಚಳುವಳಿ ಮತ್ತು ಸಹಕಾರಿ ಕಾಯಿದೆ ಒಂದೇ ಸಮಯದಲ್ಲಿ ಪ್ರಾರಂಭವಾಗಿರುವುದು ದಾಖಲೆಯಿಲ್ಲದೇ 1892ರಲ್ಲಿ ಸರ್ ಫ್ರೆಡ್ರಿಕ್ ನಿಕೋಲ್ಸನ್ ಅವರು ಯೂರೋಪ್ ದೇಶದಲ್ಲಿನ ಮಾದರಿ ಅಭ್ಯಾಸ ಮಾಡಲು ನಿಯೋಜಿಸಿ ವರದಿ ಪಡೆದು, ಜರ್ಮನಿಯ ರೇಫೆಸೆನ್ ಮಾದರಿ ಸಹಕಾರ ಸಂಘಗಳನ್ನು ಪ್ರಾರಂಭಿಸಲು ಶಿಫಾರಸ್ಸಿನೊಂದಿಗೆ 1895 ಮತ್ತು 1897ರಲ್ಲಿ ಎರಡು ಭಾಗದ ವರದಿಯನ್ನು ಸಲ್ಲಿಸಿದ ಆಧಾರದ ಮೇಲೆ ಬ್ರಿಟೀಷ್ ಆಡಳಿತ ಸಹಕಾರ ಸಂಘಗಳ ರಚನೆ ಬಗ್ಗೆ ಕ್ರಮ ತೆಗೆದುಕೊಂಡಿತು. ಸರ್ ಫ್ರೆಡ್ರಿಕ್ ನಿಕೋಲ್ಸನ್ ವರದಿಯನ್ನು ಪ್ರಾಂತ್ಯಗಳಿಗೆ ರವಾನಿಸಲಾಯಿತು. ಇದೇ ಸಂದರ್ಭದಲ್ಲಿ ಆಗಿನ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ ಅವರು ಮೂರು ಜನರ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಗೆ ಸರ್ ಎಡ್ವರ್ಡ್ ಲಾ ರವರನ್ನು ಅಧ್ಯಕ್ಷರನ್ನಾಗಿ ಮತ್ತು ಸರ್ಕಾರದ ಆರ್ಥಿಕ ಮಂತ್ರಿ (ಸದಸ್ಯ) ರಾಗಿದ್ದ ಸರ್ ಫ್ರೆಡ್ರಿಕ್ ನಿಕೋಲ್ಸನ್ ಮತ್ತು ಡೂಪರ್‌ನೆಕ್ಸ್‌ರುಗಳನ್ನು ಸದಸ್ಯರನ್ನಾಗಿ ನೇಮಿಸಿದರು. ಈ ಸಮಿತಿ ಸಹಕಾರ ಕಾಯಿದೆ ರಚಿಸಲು ಮತ್ತು ಸಹಕಾರ ಸಂಘಗಳಿಗೆ ಕೆಲವು ಸವಲತ್ತುಗಳನ್ನು ನೀಡಲು ಕ್ರಮ ಜರುಗಿಸಲು ಸೂಚಿಸಿದರು. ಅದರಂತೆ ಸಹಕಾರ ಸಾಲ (ಕ್ರೆಡಿಟ್) ಸಹಕಾರ ಕಾಯಿದೆ 1904 (25ನೇ ಮಾರ್ಚ್)ನ್ನು ರಚಿಸಲಾಯಿತು.

ಈ ಸಹಕಾರ ಕಾಯಿದೆ ರಚಿಸುವಾಗ ಅಂತರರಾಷ್ಟ್ರೀಯ ಸಹಕಾರ ಒಕ್ಕೂಟ ರಚಿಸಿದ, ಆರು ಸಹಕಾರ ತತ್ವಗಳನ್ನು ಆಧಾರವಾಗಿ ಇಡಲಾಯಿತು. ಆ ಸಹಕಾರ ತತ್ವಗಳು (1) ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ, (2) ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ, (3) ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು, (4) ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ, (5) ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ಮತ್ತು (6) ಸಹಕಾರಿಗಳಲ್ಲಿ ಸಹಕಾರ. ಈ ತತ್ವಗಳನ್ನು ಅಂತರರಾಷ್ಟ್ರೀಯ ಒಕ್ಕೂಟ ಪುನರ್ ರಚಿಸಿ, ಏಳನೇ ತತ್ವವಾಗಿ (7) ಸಾಮಾಜಿಕ ಕಳಕಳಿ ಎಂಬ ಹೊಸ ತತ್ವವನ್ನು (1995) ಸೇರಿಸಿದೆ.

1904ರ ಕಾಯಿದೆ ರಚನೆಯಾದ ನಂತರ ಬಹಳಷ್ಟು ರಾಜ್ಯಗಳಲ್ಲಿ ಸಹಕಾರ ಸಂಘಗಳು ನೋಂದಣಿ ಪ್ರಾರಂಭವಾಯಿತು. ಬೇರೆ ಬೇರೆ ರಾಜ್ಯಗಳಲ್ಲಿ 1904 ರಿಂದ ನೋಂದಣಿ ಪ್ರಾರಂಭವಾಯಿತು. ಅವುಗಳಲ್ಲಿ (1) ರಾಜ ಜೊಲಿ ಗ್ರಾಮ ಬ್ಯಾಂಕ್, ಜೊರಹಟ್, (2) ಜೊರಹಟ್ ಸಹಕಾರ ಪಟ್ಟಣ ಬ್ಯಾಂಕ್, (3) ಚರಿಗಾಂ ಗ್ರಾಮ ಬ್ಯಾಂಕ್ ಜೊರಹಟ್, ಅಸ್ಸಾಂ (1904), (4) ತಿರೂರು ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕ್ ನಿಯಮಿತ, ತಮಿಳನಾಡು (1904), (5) ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ದೇವಗಾಂ, ಪಿಪಾರಿಯ, ಮಧ್ಯಪ್ರದೇಶ (1905), (6) ಬೈನ್ಸ್ ಸಹಕಾರ ತ್ರಿಫ್ಟ್ ಮತ್ತು ಸಾಲ ಸಂಘ ನಿ., ಪಂಜಾಬ್ (1905), (7)

ಬಿಲಿಪಾಡ ಸೇವಾ ಸಹಕಾರ ಸಂಘ ನಿ., ಒರಿಸ್ಸಾ (1905), (8) ಸಹಕಾರ ತ್ರಿಫ್ಟ್ ಮತ್ತು ಸಾಲ ಸಂಘ (1905), (9) ಕಣಗಿನಹಾಳ ಸೇವಾ ಸಹಕಾರ ಬ್ಯಾಂಕ್ ನಿಯಮಿತ, ಕರ್ನಾಟಕ (1905), (10) ಕಸಬಾ ಟಡವಾಲೆ ಸಹಕಾರ ಬಹು ಉದ್ದೇಶಿತ ಸಂಘ, ಮಹಾರಾಷ್ಟ್ರ (1905), (11) ಪ್ರಿಮಿಯರ್ ಪಟ್ಟಣ ಸಾಲ ಸಂಘ, ಕಲ್ಕತ್ತ, ಪಶ್ಚಿಮ ಬಂಗಾಳ (1905)ರಲ್ಲಿ ನೋಂದಾಯಿಸಲಾಯಿತು.

ಮುಂಬೈ ಪ್ರಾಂತ್ಯದಲ್ಲಿ 1904ರ ಕಾಯಿದೆ ರಚನೆಯಾದ ನಂತರ ಪ್ರಥಮ ಸಹಕಾರ ಸಂಘವನ್ನು ಈಗಿನ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ಸ್ಥಾಪಿಸಲಾಯಿತು. ಆ ಊರಿನ ಪ್ರಮುಖರಾದ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ್ ಅವರನ್ನು ಪ್ರಚೋದಿಸಿ ಸಹಕಾರ ಸಂಘವನ್ನು ಸ್ಥಾಪಿಸಲು ಆಗಿನ ರಿಜಿಸ್ಟರ್ ಅವರು ಕಣಗಿನಹಾಳದಲ್ಲಿ ವಸತಿ ಮಾಡಿ ಸ್ಥಾಪಿಸಿದರು. ಸ್ಥಾಪಿಸುವ ಪೂರ್ವದಲ್ಲಿ ಶ್ರೀ ಪಾಟೀಲ್ ಅವರ ಷರತ್ತಿಗೆ ಒಪ್ಪಿ ಒಂದು ರೈಲ್ವೆ ನಿಲ್ದಾಣವನ್ನು ಸ್ಥಾಪಿಸಲಾಯಿತು.

ಈ ಕಾಯಿದೆಯಡಿ, ಸಂಘಗಳನ್ನು ನಿಯಂತ್ರಿಸಲು ನಿಬಂಧಕರ ಹುದ್ದೆ ಸೃಷ್ಟಿ ಮಾಡಲಾಯಿತು. ಇಂಗ್ಲೆಂಡ್‌ನಲ್ಲಿ ನಿಬಂಧಕರ ಹುದ್ದೆ ಇರಲಿಲ್ಲ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಸಹಕಾರ ಚಳುವಳಿ ಪ್ರಾರಂಭಿಸಿದಾಗ, ನಿಬಂಧಕರ ಹುದ್ದೆಯನ್ನು ಸೃಷ್ಟಿ ಮಾಡಿ, ಮುಖಂಡರನ್ನು ಸ್ವಾತಂತ್ರ್ಯ ಚಳುವಳಿಯಿಂದ ಹತ್ತಿಕ್ಕಲು ಪರೋಕ್ಷವಾಗಿ ಪ್ರಯತ್ನಿಸಲಾಯಿತು. ಈ ನಿಯಂತ್ರಣವೇ ಮುಂದೆ ಸಹಕಾರ ಚಳುವಳಿ ಕುಂಠಿತವಾಗಲು ಕಾರಣವಾಯಿತೇನೋ?

1904ರ ಕಾಯಿದೆ ಸಾಲ ನೀಡುವುದಕ್ಕಾಗಿ ಪ್ರಾರಂಭಿಸಿದ್ದರಿಂದ ಇನ್ನಿತರ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳಿಗೆ ಅವಕಾಶವಿರಲಿಲ್ಲ. ಆದ್ದರಿಂದ, 1912ರಲ್ಲಿ 1904ರ ಕಾಯಿದೆಯನ್ನು ವಿಸ್ತರಿಸಿ ತಿದ್ದುಪಡಿ ತರಲಾಯಿತು. ಈ ಕಾಯಿದೆ ರಚನೆಯಾದ ನಂತರ, 1919ರಲ್ಲಿ ಸಂವಿಧಾನದ ಉದಾರೀಕರಣದ ಆಧಾರದ ಮೇಲೆ "ಸಹಕಾರ" ಎಂಬ ವಿಷಯವನ್ನು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲಾಯಿತು. ಈ ಮಾರ್ಪಾಡಾದ ನಂತರ ರಾಜ್ಯ ಸರ್ಕಾರಗಳು ತಮ್ಮದೇ ಸಹಕಾರ ಕಾಯಿದೆಗಳನ್ನು ರಚಿಸಿಕೊಂಡವು. ಈ ಬೆಳವಣಿಗೆಯಿಂದ ಪ್ರತಿಯೊಂದು ರಾಜ್ಯ ಸಹಕಾರ ಕಾಯಿದೆ ರಚಿಸುವುದರ ಜೊತೆಗೆ ನಿಬಂಧಕರ ಹುದ್ದೆ ಸೃಷ್ಟಿ ಮಾಡಿ, ಸಹಕಾರ ಸಂಘಗಳ ನಿಯಂತ್ರಣಕ್ಕೆ ಪ್ರಯತ್ನಿಸಿ, ಸಂಖ್ಯಾಭಿವೃದ್ಧಿಗೆ ಪ್ರಯತ್ನಿಸಿದವೇ ಹೊರತು ಗುಣಾತ್ಮಕ ಬೆಳವಣಿಗೆಗೆ ಅಷ್ಟೇ ಮಹತ್ವ ನೀಡಲಿಲ್ಲ.

ಕರ್ನಾಟಕಕ್ಕೆ (ಆಗಿನ ಮೈಸೂರು) ಸಂಬಂಧಪಟ್ಟಂತೆ ಸಹಕಾರ ಕಾಯಿದೆ ರಚನೆಯಲ್ಲಿ ಅಗಿಂದಾಗ್ಗೆ ತಿದ್ದುಪಡಿಗಳನ್ನು ತಂದು, ಸಂಘಗಳ ಸಂಖ್ಯಾ ಬಲ ಹೆಚ್ಚಿಸಲು ಮತ್ತು ಆರ್ಥಿಕ ಬೆಳವಣಿಗೆ ಹೆಚ್ಚಿಸಲು ಪ್ರಯತ್ನ ನಡೆಸಿ, ರಾಜ್ಯಗಳ ಪುನರ್ ವಿಂಗಡಣೆಯಾದ ನಂತರ, ಸಹಕಾರ ಕಾಯಿದೆಗೆ ಒಂದು ರೂಪವನ್ನು 1959ರಲ್ಲಿ ನೀಡಲಾಯಿತು. 1959ರ ಕರ್ನಾಟಕ ರಾಜ್ಯ ಸಹಕಾರ ಕಾಯಿದೆ ಒಂದು ಕ್ರೋಢೀಕೃತ ಕಾಯಿದೆ. ಅಂದರೆ, ಮಹಾರಾಷ್ಟ್ರ ಸಹಕಾರ ಕಾಯಿದೆ, ಹೈದರಾಬಾದ್ ಸಹಕಾರ ಕಾಯಿದೆ, ಮದ್ರಾಸ್ ಸಹಕಾರ ಕಾಯಿದೆ, ಕೊಡಗು ಸಹಕಾರ ಕಾಯಿದೆಗಳ ಒಂದು ಕ್ರೋಢೀಕೃತ ಕಾಯಿದೆ. ಇದರಲ್ಲಿ ಯಾವುದೇ ಧ್ಯೇಯೋದ್ಧೇಶವಿರಲಿಲ್ಲ.


ಈ ಕಾಯಿದೆಗೆ 1976, 1984, 1998 ಮತ್ತು 2013ರಲ್ಲಿ ಸಮಗ್ರ ತಿದ್ದುಪಡಿಗಳನ್ನು ತರಲಾಗಿದೆ. 1976 ಮತ್ತು 1984ರ ತಿದ್ದುಪಡಿ ಕಾಯಿದೆಯಲ್ಲಿ ಸಹಕಾರ ಸಂಘಗಳನ್ನು ಸರ್ಕಾರದ/ನಿಬಂಧಕರು ನಿಯಂತ್ರಿಸಲು ಎಲ್ಲಾ ರೀತಿಯ ಅವಕಾಶಗಳನ್ನು ಸೇರಿಸಲಾಯಿತು. ಈ ಬೆಳವಣಿಗೆಯಿಂದ ಸಹಕಾರ ಸಂಸ್ಥೆಗಳು ಯಾವುದೇ ವ್ಯವಹಾರ ಕೈಗೊಳ್ಳಲು ಹಿಂಜರಿಯುವ ಪ್ರಕ್ರಿಯೇ ಪ್ರಾರಂಭವಾಗಿ, ಸಹಕಾರ ಸಂಸ್ಥೆಗಳ ಸರ್ಕಾರದ ಒಂದು ಅಂಗ ಸಂಸ್ಥೆ ಎಂಬ ಭಾವನೆ ಬೆಳೆಯಿತು. ಉದಾಹರಣೆಗೆ ಸಕ್ಕರೆ ಕಾರ್ಖಾನೆ, ನೂಲಿನ ಗಿರಣಿ ಹಾಗೂ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ಯಂತ್ರೋಪಕರಣಗಳನ್ನು ಖರೀದಿ ಮಾಡಲು ಸಹಕಾರ ಇಲಾಖಾ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಲಹಾ ಸಮಿತಿ ರಚಿಸಿ, ಆ ಸಮಿತಿಯೇ ಯಂತ್ರೋಪಕರಣ ತಯಾರಕರ ಜೊತೆ ಸಮಾಲೋಚಿಸಿ, ದರ ನಿಗದಿಪಡಿಸುವ ಕ್ರಮವಿಡಲಾಯಿತು. ಈ ಬೆಳವಣಿಗೆಯಿಂದ ಆಡಳಿತ ಮಂಡಳಿಗಳು ಮಾಡಬೇಕಾದ ಕೆಲಸವನ್ನು ಬಹುಸಂಖ್ಯೆಯ ಅಧಿಕಾರಿಗಳು ಇದ್ದಂತಹ ರಾಜ್ಯ ಮಟ್ಟದ ಸಮಿತಿ ನಿರ್ವಹಿಸಿ, ಸಹಕಾರ ಸಂಘಗಳ ಆಡಳಿತ ಮಂಡಳಿಗಳನ್ನು ನಿಷ್ಕ್ರಿಯಗೊಳಿಸಲಾಯಿತು. ಸಹಕಾರ ಸಂಸ್ಥೆಗಳನ್ನು ನಂಬಲಾಗದು ಎಂಬ ಅಭಿಪ್ರಾಯಕ್ಕೆ ಬಂದು, ಸರ್ಕಾರವೇ ಯಂತ್ರೋಪರಕಣ ಖರೀದಿ ಮಾಡಲಾಯಿತು. ಇದೇ ರೀತಿ ಕ್ರಮಗಳನ್ನು ಮುಂದುವರಿಸಿ, ಸರ್ಕಾರಕ್ಕೆ ಅಧಿಕಾರ ಇಲ್ಲದೇ ಇದ್ದರೂ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿ ವ್ಯಕ್ತಿಗಳಿಗೆ 20–30 ವರ್ಷಗಳ ಕಾಲ ನೀಡಲಾಯಿತು. ಇದರಿಂದ ಸಹಕಾರ ಸಂಘಗಳ ಕೆಲಸವನ್ನು ಸರ್ಕಾರವೇ ಮಾಡಿದಾಗ, ಸಹಕಾರ ಸಂಘಗಳ ಆಡಳಿತ ಮಂಡಳಿಗಳು ಪ್ರತಿರೋಧ ವ್ಯಕ್ತಪಡಿಸಲೇ ಇಲ್ಲ. ಏಕೆಂದರೆ ಆಡಳಿತ ಮಂಡಳಿಗಳ ಮೇಲೆ ಆರೋಪ ಬರುವುದಿಲ್ಲವೆಂಬ ಜವಾಬ್ದಾರಿ ರಹಿತ ನಿಲುವಿನಿಂದ. ಇದರಿಂದ ಸಹಕಾರ ಆಂದೋಲನದ ಬೆಳವಣಿಗೆಗೆ ಧಕ್ಕೆಯಾಗುತ್ತದೆ ಎಂಬ ಕನಿಷ್ಠ ಜವಾಬ್ಧಾರಿಯನ್ನು ಸಹಕಾರ ಸಂಸ್ಥೆಗಳು ನಿರ್ವಹಿಸಲಿಲ್ಲ. ಇದೇ ಕಾರಣಕ್ಕೆ ಸೌಹಾರ್ದ ಸಹಕಾರಿ ಕಾಯಿದೆ ರಚನೆ ಮಾಡಿದಾಗ ಬಹಳಷ್ಟು ಸಹಕಾರ ಸಂಘಗಳು ಪರಿವರ್ತನೆ ಹೊಂದಲೇ ಇಲ್ಲ. ಅಂದರೆ ಒಂದು ಸಹಕಾರ ಸಂಘದ ನೇತೃತ್ವ ವಹಿಸಿಕೊಳ್ಳಲು ಸರ್ಕಾರದ ಪ್ರತ್ಯಕ್ಷ – ಪರೋಕ್ಷ ನೆರವಿನಿಂದ ಅಧಿಕಾರದಲ್ಲಿ ಮುಂದುವರಿಯುವ ದುರಾಸೆಯಿಂದ. (ಸೌಹಾರ್ದ ಸಹಕಾರಿ ಕಾಯಿದೆ ಬಗ್ಗೆ ಮುಂದೆ ವಿವರವಾಗಿ ಪ್ರಸ್ತಾಪಿಸಲಾಗಿದೆ.) 1976 ಮತ್ತು 1984ರ ಸಮಗ್ರ ತಿದ್ದುಪಡಿ ಕಾಯಿದೆಯಿಂದ ಸಹಕಾರ ಸಂಘಗಳ ಆರ್ಥಿಕ ಸ್ವಾಯತ್ತತೆಯನ್ನು ನಿಯಂತ್ರಿಸಲಾಯಿತು. ಇದರಲ್ಲಿ ಪ್ರಮುಖವಾಗಿ ಸಂಘಕ್ಕೆ ಬೇಕಾದಾಗ ಕಟ್ಟಡ ನಿರ್ಮಿಸಲು ನಿಬಂಧಕರ ಪೂರ್ವಾನುಮತಿ, ವಾಹನ ಖರೀದಿ ಮಾಡಲು ನಿಬಂಧಕರ ಪೂರ್ವಾನುಮತಿ, ಆಡಳಿತ ಮಂಡಳಿ ಸದಸ್ಯರು ಕಾರ್ಯವ್ಯಾಪ್ತಿಯಿಂದ ಹೊರಗೆ ಅಧಿಕೃತ ಪ್ರವಾಸ (ವ್ಯವಹಾರಕ್ಕಾಗಿ) ನಿಬಂಧಕರ ಪೂರ್ವಾನುಮತಿ, ಇಂತಹ ಇನ್ನಿತರ ನಿಯಂತ್ರಣವನ್ನು ಸಹಕಾರ ಸಂಸ್ಥೆಗಳ ಮೇಲೆ ಹೇರಲಾಯಿತು.

ಇದು ಕಾನೂನಿನಲ್ಲಿ ಯಾವುದೇ ಅವಕಾಶ ಇಲ್ಲದೇ ಇದ್ದರೂ, ನಿಬಂಧಕರು ಸಹಕಾರ ಸಂಘಗಳ ಆಡಳಿತ ಮಂಡಳಿಯನ್ನು ಅಪನಂಬಿಕೆಯಿಂದ ನೋಡಲು ಪ್ರಾರಂಭಿಸಿ, ನಿಯಂತ್ರಣಕ್ಕೆ ಒಳಪಡಿಸಿದರು. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಅಂದರೆ ಕೆಲವು ಸಹಕಾರ ಸಂಘಗಳು ಸ್ವಯಂ ನಿಯಂತ್ರಿಸಿಕೊಳ್ಳದೇ ಸ್ವೇಚ್ಛಾಚಾರದಿಂದ ವರ್ತಿಸಿದ್ದರ ಆಧಾರದ ಮೇಲೆ ನಿಬಂಧಕರು ನಿಯಂತ್ರಿಸಲು ಪ್ರಯತ್ನಿಸಿದರು. ಆದರೆ, ಈ ನಿಯಂತ್ರಣದಿಂದ ಸಹಕಾರ ಆಂದೋಲನದ ಬೆಳವಣಿಗೆಗೆ ಸಹಕಾರಿಯಾಗಲಿಲ್ಲ. ಸಹಕಾರಿ ಮುಖಂಡರು ನಿಬಂಧಕರ/ಸರ್ಕಾರದ ಅವಲಂಬನೆಯತ್ತ ನಿರತರಾದರು.

ಇಂತಹ ಸಮಯದಲ್ಲಿ ಕೇಂದ್ರ ಸರ್ಕಾರ ಯೋಜನಾ ಆಯೋಗದ ಮುಖಾಂತರ (ಬ್ರಹ್ಮ ಪ್ರಕಾಶ್ ವರದಿ) 1991ರಲ್ಲಿ ಕೇಂದ್ರ ಸರ್ಕಾರ ಒಂದು ಮಾದರಿ ಸಹಕಾರ ಕಾಯಿದೆ ರಚಿಸಿ – ರಾಜ್ಯ ಸರ್ಕಾರಗಳು ಅದನ್ನು ಅಳವಡಿಸಿಕೊಳ್ಳಲು ಸೂಚಿಸಿತು. ಏಕೆಂದರೆ ಸಹಕಾರದ ಬಗ್ಗೆ ಕಾಯಿದೆ ರಚಿಸುವ ಅಧಿಕಾರವನ್ನು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತಿದ್ದದರಿಂದ. ಈ ಮಾದರಿ ಕಾಯಿದೆಯನ್ನು ಬಹಳಷ್ಟು ರಾಜ್ಯ ಸರ್ಕಾರಗಳು ಅಂಗೀಕರಿಸಲಿಲ್ಲ. ಈ ಮಧ್ಯ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಈ ವಿಷಯ ಚರ್ಚೆಗೆ ಬಂದಾಗ ಹಾಲಿ ಕಾಯಿದೆಯಲ್ಲಿರುವ ನಿಬಂಧಕರ/ಸರ್ಕಾರದ ನಿಯಂತ್ರಣವಿರುವ ಕಲಂಗಳನ್ನು ಕೈಬಿಡಲು ತೀರ್ಮಾನಿಸಲಾಯಿತು.

(ಮುಂದುವರೆಯುವುದು)

ಸ್ವಾಭಿಮಾನಿ ಸಹಕಾರಿ



# RBI NEWS - SEPTEMBER 2017

K. Vittal Shetty, Banking Consultant, kohimavittal@Hotmail.com, Mobile:9845699904

**The next meeting of the MPC is scheduled on October 3 and 4, 2017.**

| Policy Rates with effect from 02 AUGUST 2017 | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 24 JUNE 2017 | 20.00% |

Date : Sep 27, 2017

Scheduled Banks' Statement of Position in India as on Friday, September 15, 2017

(Amount in Billions of ₹ )

| | | SCHEDULED COMMERCIAL BANKS (Including RRBs) | | | ALL SCHEDULED BANKS | | |
|---|---|---|---|---|---|---|---|
| | | 16-Sep-16 | 01-SEP-2017* | 15-SEP-2017* | 16-Sep-16 | 01-SEP-2017* | 15-SEP-2017* |
| I | a) Deposits (other than from banks) | 97382.73 | 107477.13 | 107073.71 | 100039.85 | 110400.89 | 109984.19 |
| | i) Demand | 9318.68 | 11185.31 | 11248.52 | 9545.05 | 11465.27 | 11521.95 |
| | ii) Time | 88064.06 | 96291.92 | 95825.13 | 90494.8 | 98935.72 | 98462.18 |
| II | INVESTMENTS | 28256.59 | 33483.77 | 33349 | 29050.97 | 34444.19 | 34313.31 |
| III | BANK CREDIT | 72826.22 | 77708.26 | 77813.26 | 75057.62 | 80150.14 | 80244.07 |

## IMPORTANT NEWS

**Sep 10, 2017 :** RBI says it uses sophisticated machines for processing currency notes. It has been reported in a section of the press, quoting a reply to RTI application, that RBI was not using machines for counting Specified Bank Notes (SBNs). RBI actually uses sophisticated Currency Verification & Processing (CVPS) machines for checking the numerical accuracy and genuineness of the currency notes, including SBNs. These machines are way superior to the note counting machines. With a view to augmenting processing capacity, RBI is using the available machines in two shifts and has been using some machines temporarily drawn from commercial banks after suitable modifications. RBI is also exploring other options to augment processing capacity even further.

**Directions, Withdrawals, Penalties & Cancellation of Licences of Urban Co-operative Banks.**

**1) Sep 07, 2017:** Directions under Section 35A read with Section 56 of the Banking Regulation Act, 1949 Bhilwara Mahila Urban Co-operative Bank Ltd., Bhilwara (Rajasthan)

The directive dated March 07, 2017, effective from March 9, 2017, shall continue to apply to the bank for a further period of six months from September 10, 2017 to March 09, 2018 issued vide order dated 01 September, 2017.

**2) Sep 07, 2017 :** Directions under Section 35A read with Section 56 of the Banking Regulation Act, 1949 Alwar Urban Co-operative Bank Ltd., Alwar (Rajasthan)

The directive dated March 01, 2017 shall continue to apply to the bank for a further period of six months from September 08, 2017 to March 07, 2018 issued vide order dated 01 September, 2017.

**3) Sep 08, 2017 :** RBI extends Directions to The Vaish Co-operative Commercial Bank Ltd., New Delhi till January 08, 2018i, as modified from time to time, the validity of which was extended upto September 08, 2017, shall continue to apply to the bank for a further period of four months from September 09, 2017 to January 08, 2018.

**4) Sep 08, 2017 :** RBI extends validity of the Directions issued to the Indian Mercantile Co-operative Bank Ltd., Lucknow, Uttar Pradesh.The validity of the directive, which was last extended up to September 11, 2017 has further been extended for a period of six months from September 12, 2017 to March 11, 2018 vide directive dated September 01, 2017

**5) Sep 12, 2017 :** U.P. Civil Secretariat Primary Co-operative Bank Ltd., Lucknow (Uttar Pradesh) – Penalised a monetary penalty 5,00,000/- (rupees five lakh only) for continuous non-submission of the returns u/s 27 of the Act ibid and unreasonable delay in submission of compliance to deficiencies pointed out in RBI inspection.

**6) Sep 13, 2017 :** Directions under Section 35A of the Banking Regulation Act, 1949 (AACS) – Sanmitra Sahakari Bank Maryadit, Mumbai, Maharashtra has been extended for a further period of six months from September 15, 2017 to March 14, 2018 vide our directive dated September 08, 2017

**7) Sep 18, 2017 :** Reserve Bank of India cancels the Licence of the Lokseva Sahakari Bank Ltd., Pune, Maharashtra

**8) Sep 21, 2017 :** Directions under Section 35A of the

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 36



Banking Regulation Act, 1949 (AACS) – Nashik Zilla Girna Sahakari Bank Ltd., Nashik, Maharashtra has been extended for a further period of six months from September 10, 2017 to March 09, 2018 dated vide order dated September 01, 2017.

**9) Sep 22, 2017 :** Durga Co-operative Urban Bank Ltd., Vijaywada, Andhra Pradesh – Penalised (Corrected) a monetary penalty of 5.00 lakh (Rupees Five lakh only) , for violation of Reserve Bank of India directives and guidelines on loans and advances to directors and their relatives.

**10) Sep 22, 2017 :** Ranga Reddy Co-operative Urban Bank Ltd., Hyderabad, Telangana – Penalised a monetary penalty of 1.00 lakh (Rupees Five lakh only), for violation of Reserve Bank of India directives and guidelines on Exposure Norms and Statutory/Other Restrictions-UCBs.

**11) Sep 22, 2017 :** Jagruti Co-operative Urban Bank Ltd., Hyderabad, Telangana – Penalised a monetary penalty of 0.50 lakh (Rupees fifty thousand only), for violation of Reserve Bank of India directives and guidelines on loans and advances to directors and their relatives.

**12) Sep 26, 2017 :** Directions under Section 35A of the Banking Regulation Act, 1949 (AACS) – The R S Co-operative Bank Ltd., Mumbai, Maharashtra The validity of the directions was extended and modified from time to time vide subsequent Directives, the last being dated March 20, 2017 and was valid upto September 25, 2017

**13) Sep 29, 2017 :** Directions under Section 35A of the Banking Regulation Act, 1949 (AACS) – Kapol Co-operative Bank Ltd., Mumbai, Maharashtra- Extension of period shall continue to apply to the bank for a further period of six months till March 31, 2018 vide Directive dated September 25, 2017.

**Source: www.rbi.org.in**

## ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯಪರಿಶೀಲನಾ ಸಭೆ




ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಕಾರ್ಯಪರಿಶೀಲನಾ ಸಭೆಯು ದಿನಾಂಕ 18.09.2017ರಂದು ಬೆಂಗಳೂರಿನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಕಛೇರಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜನರಲ್ ಮ್ಯಾನೇಜರ್ ಆದ ಶ್ರೀ ತೋಟಗ್ನಮ್ ಜಮಾಂಗ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಆರ್.ಬಿ.ಐ. ಅಧಿಕಾರಿಗಳಾದ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಕಲ್ಪನಾ ಮೋರೆ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಜಯಕುಮಾರ, ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣ, ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ಜಿ.ಜೋಶಿ, ಶ್ರೀ ಪ್ರವೀಣ ಶ್ರೀ ಬಿಸ್ವಾಸರವರು ಭಾಗವಹಿಸಿದ್ದರು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಮತ್ತು ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆರವರು ಭಾಗವಹಿಸಿದ್ದರು.

ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಒಂದೆರಡನ್ನು ಬಿಟ್ಟರೆ ಉಳಿದೆಲ್ಲ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸುಕೋ ಮತ್ತು ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ, ಮಾದರಿಯಾಗಿವೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯು ಪಟ್ಟಣ ಸಹಕಾರ ಬ್ಯಾಂಕುಗಳ ಕಾರ್ಯಾಚರಣೆ ಮೇಲೆ ಸತತವಾಗಿ ನಿಗಾ ಇಡಬೇಕು, ಬ್ಯಾಂಕುಗಳ ಪರಿವೀಕ್ಷಣೆ ಮಾಡಬೇಕು ಮತ್ತು ಡಾಟಾ (ಅಂಕಿ ಸಂಖ್ಯೆಗಳನ್ನು) ನಿರಂತರ ಇಂದೀಕರಣ ಮಾಡುತ್ತಿರಬೇಕು, ಪ್ರತಿ 3 ತಿಂಗಳಿಗೊಮ್ಮೆ ವರದಿ ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕು. ಇತ್ತೀಚಿಗೆ ನೋಂದಣಿಯಾಗುತ್ತಿರುವ ಬಹುತೇಕ ಸಹಕಾರಿ ಸಂಸ್ಥೆಗಳು ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ನೋಂದಣಿಯಾಗುತ್ತಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ಸಂಯುಕ್ತ ಸಹಕಾರಿಯವರು ನಿಗಾ ಇಡಬೇಕು ಎಂದು ಸೂಚಿಸಿದರು.

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010